ಐಕ್ಯರಂಗ

(ವಾರ ಪತ್ರಿಕೆ)

ಭಾರತಕಮ್ಯೂನಿಸ್ಟ್‌ಪಕ್ಷ[ಮಾರ್ಕ್ಸ್‌ವಾದಿ]ಕರ್ನಾಟಕರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 ಸಂಚಿಕೆ 27 ಜುಲೈ 3, 1983 ಬೆಲೆ 60 ಪೈಸೆ

ಸರ್ಕಾರಿಯಾ ಆಯೋಗದ ವ್ಯಾಪ್ತಿ ಕುರಿತು ಪೊಲಿಟ್‌ಬ್ಯೂರೋ

"ಬಲಶಾಲಿ ಕೇಂದ್ರ"ದ ಬಗ್ಗೆ ಏಕಪಕ್ಷೀಯ ಒತ್ತು ಸಲ್ಲದು

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ನವದೆಹಲಿಯಲ್ಲಿ ಜೂನ್ 9ರಂದು ಸರ್ಕಾರಿಯಾ ಆಯೋಗದ ವ್ಯಾಪ್ತಿಯ ಕುರಿತು ಈ ಕೆಳಗಿನ ಹೇಳಿಕೆ ನೀಡಿದೆ.

ವಿಜಯವಾಡಾದಲ್ಲಿ ಮೇ 28ರಂದು ಸೇರಿದ್ದ ವಿರೋಧ ಪಕ್ಷಗಳ ನಾಯಕರು, ಕಾಂಗ್ರೆಸ್ಸೇತರ ಮುಖ್ಯಮಂತ್ರಿಗಳು ತಳೆದ ದೃಢವಾದ ಹಾಗೂ ಒಗ್ಗಟ್ಟಿನ ನಿಲುವಿನಿಂದಾಗಿ ಸರ್ಕಾರವು ಆಯೋಗಕ್ಕೆ ವಿಧಿಸಿದ ವಿಚಾರ ವ್ಯಾಪ್ತಿಯ ಬಗ್ಗೆ ಕೇಂದ್ರ ಸರಕಾರ ಪುನರ್ವಿಚಾರ ಮಾಡುವಂತಾಗಿದೆ ಎಂಬುದನ್ನು ಪಾಲಿಟ್‌ಬ್ಯೂರೋ ಗಮನಿಸಿದೆ ಇದರಿಂದಾಗಿ ಸಂಸತ್ತಿನಲ್ಲಿ ಪ್ರಧಾನಮಂತ್ರಿಯವರು ನೀಡಿದ ಹೇಳಿಕೆಯಂತೆ ಆಯೋಗ "ಸಂವಿಧಾನದ ಚೌಕಟ್ಟಿ"ಗೆ ಮಿತಗೊಳ್ಳದೆ ಕೇಂದ್ರ—ರಾಜ್ಯ ಸಂಬಂಧದ ಸಮಸ್ತ ಪ್ರಶ್ನೆಯನ್ನು ಪರಿಶೀಲಿಸಲು ಈಗ ಅಧಿಕಾರ ಪಡೆದಿದೆ.

ಆದರೂ ಆಯೋಗ "ಸಂವಿಧಾನದ ಸಂಸ್ಥಾಪಕ ಪಿತೃಗಳು ದೇಶದ ಸ್ವಾತಂತ್ರ್ಯವನ್ನು ರಕ್ಷಿಸಲು, ಐಕ್ಯತೆಯನ್ನು ಹಾಗೂ ಸಮಗ್ರತೆಯನ್ನು ಕಾಯ್ದುಕೊಳ್ಳಲು ಅ ಪ್ಪೂಂ ದು ಪ್ರಯತ್ನಪೂರ್ವಕವಾಗಿ ರೂಪಿಸಿದ ಸಂವಿಧಾನದ ಯೋಜನೆ ಹಾಗೂ ಚೌಕಟ್ಟಿಗೆ ಸಲ್ಲತಕ್ಕ ಗಮನ ಸಲ್ಲಿಸಬೇಕು" ಇತ್ಯಾದಿ ಮಾತುಗಳು ಆಯೋಗಕ್ಕೆ ವಿಧಿಸಿದ ವಿಚಾರವ್ಯಾಪ್ತಿಯಲ್ಲಿ ಇರುವುದನ್ನು ಪಾಲಿಟ್‌ಬ್ಯೂರೋ ಗಮನಿಸಿದೆ. ದೇಶದ ಐಕ್ಯತೆ ಹಾಗೂ ಸಮಗ್ರತೆಗಳಿಗೆ ಸಿ.ಪಿ.ಐ. (ಎಂ) ಸದಾ ಹೋರಾಟ ನಡೆಸಿದೆಯಾದರೂ, ದೇಶದ ಐಕ್ಯತೆಯ ಪ್ರಶ್ನೆಯನ್ನು ಹಾಗೂ ರಾಜ್ಯಗಳಿಗೆ ಸ್ವಾಯತ್ತ ಅಧಿಕಾರ ನೀಡುವ ಪ್ರಶ್ನೆಯನ್ನು ಪರಸ್ಪರ ವಿರುದ್ಧವಾಗಿ ಇಡುವುದು ಸಂಪೂರ್ಣವಾಗಿ ತಪ್ಪು ಎಂದು ಭಾವಿಸುತ್ತದೆ. ಭಾರತದಂತಹ ಬಹುರಾಷ್ಟ್ರೀಯ ದೇಶದ ಐಕ್ಯತೆಯನ್ನು ಕಾಯ್ದುಕೊಳ್ಳಬೇಕಾದರೆ, ಒಂದು ಬಲಶಾಲಿ ಕೇಂದ್ರ ಕಟ್ಟಬೇಕಾದರೆ ಅದು ರಾಜ್ಯಗಳು ಬಲಶಾಲಿಯಾಗಿದ್ದರೆ, ಸ್ವಾಯತ್ತ ಅಧಿಕಾರ ಹೊಂದಿದ್ದರೆ ಮಾತ್ರ ಸಾಧ್ಯ. ಈ ಉದ್ದೇಶ ಈಡೇರಬೇಕಾದರೆ ರಕ್ಷಣೆ, ವಿದೇಶ ವ್ಯವಹಾರ, ಸಂಪರ್ಕ, ನಾಣ್ಯ ಚಲಾವಣೆ ಇತ್ಯಾದಿಗಳನ್ನು ನೋಡಿಕೊಳ್ಳುವ ಬಲಶಾಲಿ ಕೇಂದ್ರ ಹಾಗೂ ಜನತೆಯ ಹಿತಾಸಕ್ತಿಗಳಿಗೆ ಅತ್ಯುಪಯುಕ್ತವಾಗುವ ರೀತಿಯಲ್ಲಿ ರಾಜ್ಯಗಳು ತಮ್ಮ ಅಭಿವೃದ್ಧಿಯ ಯೋಜನೆ ರೂಪಿಸುವ ಎಲ್ಲಾ ಹಕ್ಕುಗಳನ್ನು ಪಡೆಯಲು ಸಾಧ್ಯವಾಗುವಂತಹ ಸಂಘೀಯ ರಚನೆಯನ್ನು ಬಲಗೊಳಿಸುವುದೇ ಏಕಮಾತ್ರ ವಿಧಾನ.

ಭಾರತದ ಸಂವಿಧಾನದ ವಾಸ್ತವಿಕ ಕಾರ್ಯನಿರ್ವಹಣೆ, ನಿಜವಾಗಿ ಹೇಳಬೇಕಾದರೆ, ರಾಜ್ಯಗಳ ಅಧಿಕಾರ ಹಾಗೂ ಕಾರ್ಯವ್ಯಾಪ್ತಿಯಲ್ಲಿ ಕ್ರಮೇಣ ಸವೆತವುಂಟು ಮಾಡಿ, ಅವನ್ನೆಲ್ಲಾ ಒಂದೊಂದಾಗಿ ಕೇಂದ್ರ ತನ್ನ ಕೈಯಲ್ಲಿ ತಗೊಳ್ಳಲು ಅನುವು ಮಾಡಿಕೊಟ್ಟಿದೆ. ಪ್ರಜಾಸತ್ತಾತ್ಮಕವಾಗಿ ಚುನಾಯಿತಗೊಂಡ ರಾಜ್ಯ ಸರಕಾರಗಳನ್ನು ವಜಾ ಮಾಡುವವರೆಗೂ ಕೇಂದ್ರದ ಈ ಮಧ್ಯ ಪ್ರವೇಶ ಹೋಗಿದೆ. ಸಂವಿಧಾನದ ಕಾರ್ಯ ನಿರ್ವಹಣೆಯ ಕಳೆದ 33 ವರ್ಷಗಳ ಹೆಚ್ಚಿನ ಕಾಲಾವಧಿಯಲ್ಲಿ ಕೇಂದ್ರದಲ್ಲಿ ಹಾಗೂ ಹೆಚ್ಚಿನ ರಾಜ್ಯಗಳಲ್ಲಿ ಒಂದೇ ಪಕ್ಷದ ಆಳ್ವಿಕೆ ಇದಕ್ಕೆ ಭಾಗಶಃ ಕಾರಣ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಇದು ವಾಸ್ತವ ಸಂಗತಿಯ ಸಂಪೂರ್ಣ ವಿವರಣೆ ನೀಡುವುದಿಲ್ಲ. ರಾಜ್ಯಗಳ ನಿರ್ವಹಣೆ, ಅಧಿಕಾರ ಹಾಗೂ ಜವಾಬ್ದಾರಿಗಳನ್ನು ಸತತವಾಗಿ ಅತಿಕ್ರಮಿಸಿಕೊಂಡು ಬರಲು ಕೇಂದ್ರ, ರಾಜ್ಯ ಹಾಗೂ ಸಹವರ್ತಿ ಪಟ್ಟಿಗಳನ್ನು ಸಂವಿಧಾನದಲ್ಲಿ ಅಳವಡಿಸಿದ ರೀತಿಯೂ ಕಾರಣ.

ಸರ್ಕಾರಿಯಾ ಆಯೋಗಕ್ಕೆ ರಾಜ್ಯಗಳ ಸ್ವಾಯತ್ತತೆಯನ್ನು ಹೊರತುಪಡಿಸಿ ಭಾರತದ ಐಕ್ಯತೆಯನ್ನು ರಕ್ಷಿಸುವ ಜವಾಬ್ದಾರಿ ವಿಧಿಸುವಾಗ ಸರಕಾರ ಸಂವಿಧಾನದ 33 ವರ್ಷಗಳ ಕಾರ್ಯನಿರ್ವಹಣೆಯ ಈ ಅನುಭವವನ್ನು ಗಮನಕ್ಕೆ ತಗೊಂಡಿಲ್ಲ.

ವಿಜಯವಾಡಾದಲ್ಲಿ ಮೇ 28 ರಂದು ಸೇರಿದ್ದ ವಿರೋಧಿ ನಾಯಕರು ಹಾಗೂ ಕಾಂಗ್ರೆಸ್ (ಐ) ಯೇತರ ಮುಖ್ಯಮಂತ್ರಿಗಳು ರಾಜ್ಯಗಳ ಸ್ವಾಯತ್ತತೆಯ ಅರ್ಥ ಕೇಂದ್ರದೊಡನೆ ಘರ್ಷಣೆ ಎಂದೇನೂ ಅಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಕೇಂದ್ರಕ್ಕೆ ಸಾಕಷ್ಟು ಅಧಿಕಾರಗಳು ಹಾಗೂ ಕಾರ್ಯವ್ಯಾಪ್ತಿಯಿರಬೇಕೆಂಬುದರ ಬಗ್ಗೆ ಕೇಂದ್ರದಲ್ಲಿ ಆಳುವ ಪಕ್ಷದ ನಾಯಕರಿಗಿರುವಷ್ಟೇ ಆಸಕ್ತಿ ವಿರೋಧ ಪಕ್ಷಗಳಿಗೂ ಇದೆ. ಆದರೆ ಕೇಂದ್ರ ಸರಕಾರ ಮಾಡುವಂತೆ "ಬಲಶಾಲಿ ಕೇಂದ್ರ"ದ ಬಗ್ಗೆ ಏಕಪಕ್ಷೀಯ ಒತ್ತು ಕೊಡುವುದರಿಂದ ಇದು ಸಾಧ್ಯವಾಗದು ಬದಲಿಗೆ ಈಗ ಸಂವಿಧಾನದ ಕಟ್ಟುಪಾಡುಗಳಲ್ಲೇ ಇರುವ ಅಥವಾ ಕಳೆದ 30 ವರ್ಷಗಳಲ್ಲಿ ಅದರ ಕಾರ್ಯನಿರ್ವಹಣೆಯಲ್ಲಿ ಕಂಡುಬಂದ ವಿಕೃತಿಗಳನ್ನು ನಿವಾರಿಸುವ ದೃಷ್ಟಿಯಿಂದ ಸಂವಿಧಾನದ ಕಾರ್ಯ ನಿರ್ವಹಣೆಯ ಮರುಪರಿಶೀಲನೆ ನಡೆಯಬೇಕಾಗಿದೆ.

ಆದ್ದರಿಂದ ಸರ್ಕಾರಿಯಾ ಆಯೋಗಕ್ಕೆ ಕೇಂದ್ರ—ರಾಜ್ಯ ಸಂಬಂಧಗಳಿಗೆ ಸಂಬಂಧಪಟ್ಟಂತೆ ಎಲ್ಲಾ ಅಂಶಗಳನ್ನು ಪರಿಶೀಲಿಸಿ ನಡೆಸಲು, ಶಿಫಾರಸು ಮಾಡಲು, ಅನುವು ಮಾಡಿ ಕೊಡಬೇಕು. ಸಂವಿಧಾನಕ್ಕೆ ಅಗತ್ಯವೆನಿಸುವ ತಿದ್ದುಪಡಿಗಳನ್ನು ಶಿಫಾರಸು ಮಾಡಲೂ ಅದಕ್ಕೆ ಅವಕಾಶವಾಗುವಂತೆ ತಕ್ಕ ಸ್ಪಷ್ಟೀಕರಣ ನೀಡಬೇಕೆಂದು ಪಾಲಿಟ್‌ಬ್ಯೂರೋ ಕೇಂದ್ರ ಸರಕಾರವನ್ನು ಒತ್ತಾಯಿಸುತ್ತದೆ. ರಾಜ್ಯಗಳ ಸ್ವಾಯತ್ತತೆ ಹಾಗೂ ಜತೆಗೆ ದೇಶದ ಐಕ್ಯತೆಯನ್ನು ಬಲಗೊಳಿಸುವ ಶಿಫಾರಸುಗಳನ್ನು ಮಾಡುವ ಹಾದಿಯಲ್ಲಿ ಸರ್ಕಾರಿಯಾ ಆಯೋಗ ಸಾಗುವಂತೆ ಮಾರ್ಗೋಪಾಯಗಳನ್ನು ರೂಪಿಸಬೇಕೆಂದು ಎಲ್ಲಾ ವಿರೋಧ ಪಕ್ಷಗಳಿಗೆ ಪಾಲಿಟ್‌ಬ್ಯೂರೋ ಮನವಿ ಮಾಡಿಕೊಳ್ಳುತ್ತದೆ.

ಸಂಪಾದಕೀಯ

ಪುದುಚೇರಿಯಲ್ಲಿ ಪ್ರಜಾಪ್ರಭುತ್ವದ ಕೊಲೆ

ಸಂವಿಧಾನಾತ್ಮಕವಾಗಿ ಆರಿಸಿಬಂದಿರುವ ಪುದುಚೇರಿಯ ವಿಧಾನ ಸಭೆಯನ್ನು ಕೇಂದ್ರ ಸರಕಾರ ಜೂನ್ 24ರಂದು ವಿಸರ್ಜಿಸಿ ಪ್ರಜಾಪ್ರಭುತ್ವದ ಕೊಲೆ ಮಾಡಿದೆ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ಹೇಳುತ್ತಿರುವಂತೆ ಇಂದಿರಾ ಗಾಂಧಿಯ ಸರ್ವಾಧಿಕಾರ ಇನ್ನೂ ಪ್ರಭಾವಿತವಾಗಿದೆ. ಅಪಾಯಕಾರಿಯಾಗಿದೆ. ವಿರೋಧ ಪಕ್ಷಗಳ ಸರಕಾರಗಳಿಗೆ ಗಂಡಾಂತರಕಾರಿಯಾಗಿದೆ. ಕಾರಣ ಇದರ ವಿರುದ್ಧ ಹೋರಾಟ ನಿರಂತರವಾಗಿ ಮುಂದುವರಿಯಬೇಕು.

ಜನವರಿ 5ರಂದು ನಡೆದ ಕರ್ನಾಟಕ–ಆಂಧ್ರ ರಾಜ್ಯಗಳ ಚುನಾವಣಾ ಫಲಿತಾಂಶ ಇಂದಿರಾ ಗಾಂಧಿಯವರಲ್ಲಿ ಭಯ ಭೀತಿಯನ್ನುಂಟು ಮಾಡಿದೆ. ಮೇ ತಿಂಗಳಲ್ಲಿ ನಡೆದ ಕಾಶ್ಮೀರದ ಚುನಾವಣೆಯಲ್ಲಿ ಅಧಿಕಾರಕ್ಕೆ ಬರಬೇಕೆಂದು ಮಾಡಿದ ಪ್ರಯತ್ನ ವಿಫಲಗೊಂಡಿತು. ಇಂಥ ಪರಿಸ್ಥಿತಿಯಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ವಿರೋಧ ಪಕ್ಷಗಳ ಸರಕಾರಗಳನ್ನು ಸುಳ್ಳು ನೆವ ಹೇಳಿ ಉರುಳಿಸುವ ಒಳಸಂಚು ಮಾಡುವುದೊಂದೇ ಇಂದಿರಾ ಮುಂದಿರುವ ಕ್ರಮವಾಗಿದೆ.

ಪಶ್ಚಿಮ ಬಂಗಾಲದ ಎಡರಂಗ ಸರಕಾರವನ್ನೂ ಉರುಳಿಸಲು ಕಳೆದೆರಡು ವರ್ಷಗಳಿಂದ ಸತತ ಪ್ರಯತ್ನ ಮಾಡಲಾಗಿತ್ತು. ಹಿಂಸಾಚಾರದ ಆರೋಪ ಹೊರಿಸಲಾಗಿತ್ತು. ಕಾಯಿದೆ ಕಾನೂನು ಮುರಿದು ಬಿದ್ದಿದೆಂಬ ಪ್ರಚಾರ ಮಾಡಲಾಯಿತು. ಆದರೆ ಪಶ್ಚಿಮ ಬಂಗಾಲದ ಜನತೆ ಇಂಥ ಅಪಪ್ರಚಾರಗಳಿಗೆ ಕಿವಿಗೊಡಲಿಲ್ಲ. ಕಾಂಗ್ರೆಸ್ಸಿನ ಒಳಸಂಚು ವಿಫಲಗೊಂಡಿತು. ವಿಧಾನ ಸಭೆ ಮತ್ತು ಪಂಚಾಯತ್ ಚುನಾವಣೆಗಳಲ್ಲಿ ಎಡರಂಗ ಕಾಂಗ್ರೆಸ್ಸಿಗೆ ಸರಿಯಾದ ಉತ್ತರ ನೀಡಿದೆ. ಇಂದಿರಾ ಸಂಚು ಅಲ್ಲಿ ನಡೆಯಲಿಲ್ಲ. ಪ್ರಣಬ್ ಮುಖರ್ಜಿಯವರ ಗಂಟಲು ಆರಿ ಹೋಯಿತು. ಆದರೆ ಜ್ಯೋತಿ ಬಸು ಸರಕಾರ ಉರುಳಲಿಲ್ಲ.

ಎ.ಐ.ಡಿಎಂ. ಕೆ. ಸರಕಾರದ ವಿರುದ್ಧ ತಮಿಳುನಾಡಿನಲ್ಲಿಯೂ ಅಕ್ಕಿ ಪೂರೈಕೆಯ ನಿರಾಕರಣೆಗಳನ್ನೊಳಗೊಂಡು ಹಲವಾರು ಕುತಂತ್ರಗಳು ನಡೆಯಿತು. ಆದರೆ ರಾಮಚಂದ್ರನ್ ಸರಕಾರ ಉರುಳಿಸುವುದು ಸುಲಭವಲ್ಲೆಂದು ಇಂದಿರಾಗಾಂಧಿಗೆ ಗೊತ್ತು.

ಅತಿ ಸುಲಭವಾಗಿ ತನ್ನ ಅಭಿಲಾಶೆಯನ್ನು ಪೂರೈಸಿಕೊಳ್ಳಲು ಪುದುಚೇರಿ ಅತಿಯೋಗ್ಯವಾಗಿದೆಂದು ತಿಳಿದು ತನ್ನ ಬ್ರಹ್ಮಾಸ್ತ್ರವನ್ನು ಒಗೆದಿದ್ದಾರೆ. ವಿಧಾನ ಸಭೆಯನ್ನು ವಿಸರ್ಜಿಸಿದ್ದಾರೆ.

ಡಿ. ಎಂ. ಕೆ. ಕಾಂಗ್ರೆ ಸರಕಾರಗಳು ಪುದುಚೇರಿಯಲ್ಲಿ ಅಸ್ತಿತ್ವದಲ್ಲಿದ್ದವು. ಪುದುಚೇರಿ ಮುಖ್ಯ ಮಂತ್ರಿ ರಾಮಚಂದ್ರನ್ ಅವರು ಹೆಗಡೆಯವರು ಕರೆದಿದ್ದ ದಕ್ಷಿಣ ವಲಯದ ಮುಖ್ಯ ಮಂತ್ರಿಗಳ ಸಭೆಯಲ್ಲಿ ಭಾಗವಹಿಸಿದಂದಿನಿಂದ ಕಾಂಗ್ರೆಸು ಅಸಮಾಧಾನಗೊಂಡಿತ್ತು. ಈಗ ಬೇರೆ ಕಾರಣಗಳನ್ನು ಮುಂದೆ ಮಾಡಿ ಕಾಂಗ್ರೆ ಸಂಯುಕ್ತ ಸರಕಾರದಿಂದ ಹೊರಬಿತ್ತು. ಈ ಸುದ್ದಿ ತಿಳಿದ ಕೂಡಲೇ ಜನತಾ, ಮುಸ್ಲಿಂಲೀಗ್. ಸಿ. ಪಿ. ಐ.(ಎಂ) ಪಕ್ಷಗಳು ಡಿ. ಎಂ. ಕೆ. ಸರಕಾರ ರಕ್ಷಣೆಗೆ ಧಾವಿಸಿದವು. ಡಿ. ಎಂ. ಕೆ. ಯ 13, ಜನತಾ 3, ಮುಸ್ಲಿಂಲೀಗ್ ಮತ್ತು ಸಿ. ಪಿ. ಐ. (ಎಂ)1 ಹೀಗೆ ವಿಧಾನ ಸಭೆಯ 30 ಸದಸ್ಯರಲ್ಲಿ 18 ಸದಸ್ಯರ ಬೆಂಬಲವಿದ್ದರೂ ಕೂಡ, ಕಾಂಗ್ರೆಸ್ಸಿನವರೇ ಆದ ಲೆ॥ ಗವರ್ನರ ಚಾಂಡಿಯವರ ವರದಿಯ ಆಧಾರದ ಮೇಲೆ ಕೇಂದ್ರ ಸಂಪುಟ ವಿಧಾನ ಸಭೆಯನ್ನು ವಿಸರ್ಜಿಸುವ ನಿರ್ಧಾರ ಮಾಡಿತು. ಈ ನಿರ್ಣಯ ಸಂವಿಧಾನಕ್ಕೆ ವಿರುದ್ಧವಾಗಿದೆ. ಕಾಂಗ್ರೆಸ್ ತನ್ನ ಬೆಂಬಲ ಹಿಂತಿರುಗಿ ತೆಗೆದುಕೊಂಡ ಕೂಡಲೇ ಮುಖ್ಯ ಮಂತ್ರಿ ರಾಮಚಂದ್ರನ್ ರಾಜೀನಾಮೆ ಕೊಡಬೇಕಾಗಿತ್ತೆಂದು ಲೆ॥ ಗವರ್ನರ್ ಚಾಂಡಿಯವರು ಹೇಳಿಕೆ ನೀಡಿದ್ದಾರೆ. ಅರ್ಥವಿಲ್ಲದ ಹೇಳಿಕೆ ಅದಾಗಿದೆ. ಕಾಂಗ್ರೆಸು ಮಂತ್ರಿ ಮಂಡಲದಿಂದ ಹೊರಬಿದ್ದ ಕೂಡಲೇ ಜನತಾ, ಸಿ. ಪಿ. ಐ. (ಎಂ) ಮುಸ್ಲಿಂಲೀಗ್ ಬೆಂಬಲ ವ್ಯಕ್ತಪಡಿಸಿದಾಗ, ವಿಧಾನ ಸಭೆಯಲ್ಲಿ 30ರಲ್ಲಿ 18 ಶಾಸಕರ ಬೆಂಬಲವಿದೆಯೆಂದು ತೋರಿಸಿಕೊಟ್ಟಾಗ, ಕೂಡಲೇ ವಿಧಾನ ಸಭೆ ಕರೆದು ತನ್ನ ಬಹುಮತ ತೋರಿಸಬೇಕೆಂದು ಲೆ॥ ಗವರ್ನರ್ ವಿಧಾನ ಸಭೆ ಕರೆಯಬೇಕಾಗಿತ್ತು. ಅಂಥ ಸಂವಿಧಾನಾತ್ಮಕ ಕ್ರಮ ಕೈಗೊಳ್ಳದೆ ವಿಧಾನ ಸಭೆ ವಿಸರ್ಜಿಸಬೇಕೆಂದು ಶಿಫಾರಸು ಮಾಡಿರುವುದು ಪ್ರಜಾ ಪ್ರಭುತ್ವದ ಕಗ್ಗೊಲೆಯಾಗಿದೆ.

ಹೋದ ವರ್ಷ ಹರಿಯಾಣದಲ್ಲಿ ಅಲ್ಪ ಮತ ಪಡೆದಿದ್ದ ಕಾಂಗ್ರೆಸ್ ಮುಖಂಡನನ್ನು ಕರೆದು ಸರ್ಕಾರ ರಚಿಸಲು ಹೇಳಿ ಪಕ್ಷಾಂತರಕ್ಕೆ ಅನುವು ಮಾಡಿಕೊಡಲಾಗಿತ್ತು. ಅದೇ ನೀತಿಯನ್ನು ಕರ್ನಾಟಕದಲ್ಲಿ ಕೂಡ ಅನುಸರಿಸಬೇಕೆಂಬ ಪ್ರಯತ್ನ ನಡೆಯಿತಾದರೂ ಗವರ್ನರ್ ಗೋವಿಂದನಾರಾಯಣ್ ಸಂವಿಧಾನ ವಿರೋಧ ಕ್ರಮ ಕೈಗೊಳ್ಳಲು

(8ನೇ ಪುಟ ನೋಡಿ)

ಭೂಮಿ ಖಾಯಂ ಆಗುವ ತನಕ ಹೋರಾಡಲು ದರ್ಖಾಸ್ತುದಾರರ ಸಮ್ಮೇಳನದ ನಿರ್ಧಾರ

ಸಮಸ್ಯೆ

ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ಸರಕಾರಿ ಭೂಮಿಯಲ್ಲಿ ಹಲವಾರು ವರ್ಷಗಳಿಂದ ವಾಸಿಸುತ್ತಾ ಬಂದಿರುವ ಮತ್ತು ಸರಕಾರಿ ಜಾಗದಲ್ಲಿ ಅಲ್ಪ ಸ್ವಲ್ಪ ಕೃಷಿ ಮಾಡಿ ಅನುಭೋಗಿಸಿಕೊಂಡು ಬಂದಿರುವ ಬಡಕುಟುಂಬಗಳ ಸಂಖ್ಯೆ ಐವತ್ತು ಸಹಸ್ರಕ್ಕೂ ಹೆಚ್ಚಿಗಿದೆ ತಮ್ಮ ಸ್ವಾಧೀನವಿರುವ ಸರಕಾರಿ ಭೂಮಿಯನ್ನು ತಮ್ಮ ಹೆಸರಿಗೆ ಖಾಯಂ ಗೊಳಿಸಿ ಹಕ್ಕುಪತ್ರ (ಡಿ-ನೋಟೀಸು) ಕೊಡುವುದಕ್ಕಾಗಿ ಈ ಬಡಜನರು ಎಷ್ಟೋ ಬಾರಿ ರೆವಿನ್ಯೂ ಇಲಾಖೆಗೆ ಅರ್ಜಿಸಲ್ಲಿಸಿರುವರಾದರೂ ಬೇರೆಬೇರೆ ನೆಪಗಳನ್ನು ಹೇಳಿ ಭೂಮಿಯನ್ನು ಖಾಯಂ ಗೊಳಿಸಲಾಗಿಲ್ಲ. ಆದರೆ ಅದೇ ಸಂದರ್ಭದಲ್ಲಿ ದೊಡ್ಡ ಭೂಮಾಲಿಕರೂ, ಶ್ರೀಮಂತರೂ, ಪ್ರಭಾವಿತ ವ್ಯಕ್ತಿಗಳೂ ಒಬ್ಬೊಬ್ಬರಿಗೂ ಹತ್ತಾರು ಎಕರೆಯಂತೆ ಸರಕಾರಿ ಭೂಮಿಯನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡಿರುವರು. ಅದೂ ಸಾಲದೆಂಬಂತೆ ಈ ಜನರು ಒಬ್ಬೊಬ್ಬರೂ ಹಲವಾರು ಎಕರೆ ಸರಕಾರಿ ಭೂಮಿಯನ್ನು ತಮ್ಮ ಸ್ವಾಧೀನವಿರಿಸಿಕೊಂಡಿರುವರು. ಬಡಜನರ ಸ್ವಾಧೀನವಿರುವ ಸರಕಾರಿ ಭೂಮಿಯನ್ನು ತಮಗೆ ಸೇರಿದ್ದೆಂದು (ಕುಮ್ಕಿ ಭೂಮಿಯೆಂದು) ಹೇಳಿ ಬಡಜನರಿಗೆ ಭೂಮಿ ಖಾಯಂ ಆಗದಂತೆಯೇ ನೋಡಿಕೊಂಡಿರುವರು. ಎಷ್ಟೋ ಮಂದಿ ಬಡಜನರ ಸ್ವಾಧೀನವಿರುವ ಭೂಮಿಯನ್ನು ಲಂಚದ ಪ್ರಭಾವದಿಂದ ಬೇರೆಯವರ ಹೆಸರಿಗೆ ಖಾಯಂ ಗೊಳಿಸಿದ್ದೂ ಉಂಟು.

ಆಳುವ ಪಕ್ಷ ಮತ್ತು ಸರಕಾರಗಳ ವರ್ಗಗುಣವೂ, ಅಸಂಬದ್ಧ ಮತ್ತು ಅಮಾನವೀಯ ಕಾನೂನು ಹಾಗೂ ಯೋಜನೆಗಳೂ, ರೆವಿನ್ಯೂ ಇಲಾಖೆಯಲ್ಲಿನ ಭ್ರಷ್ಟಾಚಾರವೂ ಸರಕಾರಿ ಜಾಗದಲ್ಲಿ ವಾಸಿಸುವ ಬಡಜನರನ್ನು ಹಿಂಸಿಸುತ್ತಿವೆ. ಹಲವಾರು ವರ್ಷಗಳಿಂದ ಬಡಜನರು ಅನುಭೋಗಿಸುತ್ತಾ ಬಂದಿರುವ, ಅವರು ವಾಸ್ತವ್ಯವಿರುವ ಸರಕಾರಿ ಭೂಮಿಯನ್ನು ಹೊಸದಾಗಿ ರಚಿಸುವ ಮೈನರ್ ಫಾರೆಸ್ಟ್ ಅಥವಾ ಸಾಮಾಜಿಕ ಅರಣ್ಯಗಳೊಳಗೆ ಸೇರಿಸಿಕೊಂಡು ಆಮೇಲೆ ಅವೆಲ್ಲಾ ಫಾರೆಸ್ಟ್ ಒಳಗೆ ಇರುವುದರಿಂದ ಅಂತಹ ಭೂಮಿಯನ್ನು ಖಾಯಂಗೊಳಿಸುವುದು ಅಸಾಧ್ಯವೆಂಬುದಾಗಿ ಹೇಳಿ ಬಡಜನರನ್ನು ಬಲಾತ್ಕಾರದಿಂದ ಭೂಮಿಯಿಂದ ಓಡಿಸುವ ಪ್ರಯತ್ನ ನಡೆಯುತ್ತಿದೆ. ಹಾಗೆಯೇ ಮುನಿಸಿಪಾಲಿಟಿಗಳು ರಚಿತವಾಗುವುದಕ್ಕೆ ಎಷ್ಟೋ ಮೊದಲಿಂದಲೇ ಅಲ್ಪಸ್ವಲ್ಪ ಭೂಮಿಯಲ್ಲಿ ಕೃಷಿ ಮಾಡಿ, ಮನೆ ಕಟ್ಟಿಕೊಂಡು ಅನುಭೋಗಿಸುತ್ತಾ ಬಂದಿರುವ ಬಡಜನರಿಗೆ ಇದೀಗ ಮುನಿಸಿಪಾಲಿಟಿಗಳೊಳಗೆ ಕೇವಲ 5 ಅಥವಾ 10 ಸೆಂಟ್ಸ್ ಜಾಗದಿಂದ ಹೆಚ್ಚಿಗೆ ಕೊಡಲಾಗುವುದಿಲ್ಲ ಎಂದು ಹೇಳಿ ಅವರು ಪತ್ತಾರು ವರ್ಷಗಳಿಂದ ಕಷ್ಟಪಟ್ಟು ಮಾಡಿರುವ ಅಲಫಲವನ್ನೆಲ್ಲಾ ನಾಶ ಮಾಡುವ ಕೆಲಸವೂ ಪ್ರಾರಂಭವಾಗಿದೆ. ಆದರೆ ಅದೇ ಸಂದರ್ಭದಲ್ಲಿ ಮುನಿಸಿಪಾಲಿಟಿಗಳೊಳಗೆಶ್ರೀಮಂತರು ತಮ್ಮ ಸ್ವಾಧೀನ ವಿರಿಸಿಕೊಂಡಿರುವ ಸರಕಾರಿ ಭೂಮಿಯ ಬಗ್ಗೆ ರೆವಿನ್ಯೂ ಇಲಾಖೆಯವರಿಂದ ಚಕಾರ ಶಬ್ದವಿಲ್ಲ!

1978ನೇ ಇಸವಿ ಕೊನೆಯೊಳಗೆ ಅರ್ಜಿ ಸಲ್ಲಿಸಿರುವವರಿಗೆ ಮಾತ್ರ ಭೂಮಿಯನ್ನು ಖಾಯಂಗೊಳಿಸಬಹುದು ವೆಂಬ ಹಿಂದಿನ ಸರಕಾರದ ನಿರ್ಧಾರದಿಂದಲಾಗಿ ಸಹಸ್ರಾರು ಬಡಜನರಿಗೆ ಅನ್ಯಾಯವಾಗಿದೆ. 1978ನೇ ಇಸವಿಗಿಂತ ಹಲವು ವರ್ಷಗಳಿಗೆ ಮೊದಲಿಂದಲೇ ಸರಕಾರಿ ಭೂಮಿಯಲ್ಲಿ ಆಗಮೆ ಮಾಡಿರುವರಾದರೂ, ಹಲವು ಬಾರಿ ಅರ್ಜಿಗಳನ್ನು ಸಲ್ಲಿಸಿರುವರಾದರೂ, ಈಗ ಹೊಸದಾಗಿ ಅರ್ಜಿ ಸಲ್ಲಿಸಿದರೆ 1978ನೇ ಇಸವಿ ಕೊನೆಯೊಳಗೆ ಬಂದಿಲ್ಲವೆಂಬ ಒಂದೇ ಕಾರಣದಿಂದ ಅರ್ಜಿ ತಿರಸ್ಕೃತ! ಹತ್ತಿಪ್ಪತ್ತು ವರ್ಷಗಳಿಗೆ ಹಿಂದೆಯೇ ಸರಕಾರಿ ಭೂಮಿಯಲ್ಲಿ ವಾಸಿಸುವುದಕ್ಕೆ ಪ್ರಾರಂಭಿಸಿರುವ ಬಡವ ಈಗ ಅರ್ಜಿ ಹಾಕುವಂತಿಲ್ಲ. ಎಲ್ಲೋ ಯಾರಿಗಾದರೂ ಕೆಲವರಿಗೆ ಭೂಮಿ ಖಾಯಂ ಆದರೆ ಅವರು ಬಹಳಷ್ಟು ದಂಡನೆ ತೆರಬೇಕು. ಇದರೊಂದಿಗೆ ಲಂಚವು ಸೇರಬೇಕು. ಒಟ್ಟಾಗುವಾಗ ಭೂಮಿಯನ್ನು ಕ್ರಯಕ್ಕೆ ಪಡಕೊಳ್ಳುವುದಕ್ಕಿಂತಲೂ ದುಬಾರಿ.

ರೆವಿನ್ಯೂ ಇಲಾಖೆಗಳ ಪ್ರಕಾರ ಸರಕಾರಿ ಜಾಗದಲ್ಲಿರುವ ಎಲ್ಲ ಜನರ ಅರ್ಜಿಗಳ ವಿಲೇವಾರಿ ಆಗಿದೆ. ಯಾವುದೇ ರಿಕಾರ್ಡುಗಳು ಬಾಕಿ ಇಲ್ಲ. ಯಾವುದಾದರೊಂದು ಕಾರಣ ತೋರಿಸಿ ಅರ್ಜಿಗಳನ್ನು ತಿರಸ್ಕರಿಸುವುದರ ಮೂಲಕ ಕಡತ ವಿಲೇವಾರಿ ಮಾಡಲಾಗಿದೆ. ಆದರೆ ಸುಳ್ಯ, ಪುತ್ತೂರು ಮತ್ತು ಬೆಳ್ತಂಗಡಿ ತಾಲ್ಲೂಕುಗಳಲ್ಲೆ ಈ ರೀತಿ ಭೂಮಿ ಖಾಯಂ ಆಗದ ಕುಟುಂಬಗಳ ಸಂಖ್ಯೆ ಐವತ್ತು ಸಹಸ್ರದಷ್ಟಿದೆ! ಈ ಪೈಕಿ ಹೆಚ್ಚಿನವು ಬಡ ಕೃಷಿ ಕೂಲಿಗಾರ ಮತ್ತು ಬಡ ರೈತ ಕುಟುಂಬಗಳೇ ಆಗಿವೆ. ಎಲ್ಲೆ ಕೂತಿದ್ದರೂ ಯಾವಾಗಲೇ ಕೂತಿದ್ದರೂ ಅವರವರ ಸ್ವಾಧೀನವಿರುವ ಎಲ್ಲ ಭೂಮಿಯನ್ನು ಬಡಜನರಿಗೆ ಧರ್ಮಾರ್ಥವಾಗಿ ಖಾಯಂಗೊಳಿಸಿ ಉಚಿತವಾಗಿ ಹಕ್ಕು ಪತ್ರ ಕೊಡುವುದು ನ್ಯಾಯ ಸಮ್ಮತ ಮತ್ತು ಅವಶ್ಯ.

ಸರಕಾರಿ ಭೂಮಿಯಲ್ಲಿ ವಾಸಿಸುವ ಮತ್ತು ಸರಕಾರಿ ಭೂಮಿಯನ್ನು ಅನುಭೋಗಿಸುತ್ತಲಿದ್ದು ಭೂಮಿ ಖಾಯಂ ಆಗದಿರುವ ಸಮಸ್ಯೆಯು ಕೇವಲ ಸುಳ್ಯ, ಪುತ್ತೂರು ಮತ್ತು ಬೆಳ್ತಂಗಡಿ ತಾಲ್ಲೂಕುಗಳಿಗಷ್ಟೆ ಸೀಮಿತವಾಗಿಲ್ಲ. ಇದು ದ.ಕ. ಜಿಲ್ಲೆ ಮತ್ತು ರಾಜ್ಯದಾದ್ಯಂತ ಇರುವ ಒಂದು ಸಾಮೂಹಿಕ ಪ್ರಶ್ನೆ. ದ.ಕ. ಜಿಲ್ಲೆಯಲ್ಲಿ ಈ ರೀತಿ ಇರುವ ಬಡ ಕುಟುಂಬಗಳ ಸಂಖ್ಯೆ ಒಂದು ಲಕ್ಷಕ್ಕಿಂತಲೂ ಹೆಚ್ಚಗಿರಬಹುದು. ಸುಳ್ಯ, ಪುತ್ತೂರು ಮತ್ತು ಬೆಳ್ತಂಗಡಿ ತಾಲ್ಲೂಕುಗಳ ಹಳ್ಳಿಗಳಲ್ಲಿ ಕಾಲ್ನಡೆ ಜಾತಾ ಹೋದಾಗ ನಡೆಸಿದ ಅಧ್ಯಯನ ಮತ್ತು ಜನರ ಅಭಿಪ್ರಾಯಗಳ ಆಧಾರದಲ್ಲಿ ಸರಕಾರಿ ಭೂಮಿಯನ್ನು ಖಾಯಂಗೊಳಿಸುವ ಪ್ರಶ್ನೆಯನ್ನು ಮುಂದಿಟ್ಟು ಬಡಜನರನ್ನು ಸಂಘಟಿಸಿ ಹೋರಾಡುವ ಅಭಿಪ್ರಾಯ ಉಂಟಾಯಿತು. ರಾಜ್ಯವ್ಯಾಪಿಯಾಗಿರುವ ಮತ್ತು ಬಹಳ ಗಹನವಾಗಿರುವ ಈ ಪ್ರಶ್ನೆಯ ಬಗ್ಗೆ ದೀರ್ಘಕಾಲದ ಹೋರಾಟ ನಡೆಸಬೇಕಾದೀತು ಎಂಬ ಅಭಿಪ್ರಾಯವನ್ನು ಮಾಡಿ ಹೋರಾಟಕ್ಕೆ ನೇತೃತ್ವ ಕೊಡಲು ಕಾ. ಎಂ. ಕೆ. ಭಟ್ ಅವರು ಅಧ್ಯಕ್ಷರಾಗಿರುವ ಮೂರು ತಾಲ್ಲೂಕುಗಳ ವ್ಯಾಪ್ತಿಗೆ ಸೇರಿದ ಮೂವತ್ತು ಮಂದಿಯ ಹೋರಾಟ ಸಮಿತಿಯನ್ನು ರಚಿಸಲಾಯ್ತು.

ಸಮ್ಮೇಳನ

ರಾಜ್ಯದ ಮುಖ್ಯ ಮಂತ್ರಿಯವರಿಗೂ, ಸರಕಾರಕ್ಕೂ ಈ ಹಿಂದೆಯೇ ಅಂದರೆ ಮಾರ್ಚ್ 3ರಂದು ಸಲ್ಲಿಸಿದ ಮನವಿಯಲ್ಲಿರುವ ಸರಕಾರಿ ಭೂಮಿಯಲ್ಲಿರುವ ಬಡ ಜನರಿಗೆ ಧರ್ಮಾರ್ಥವಾಗಿ ಭೂಮಿ ಖಾಯಂಗೊಳಿಸಬೇಕೆನ್ನುವ ಬೇಡಿಕೆಯನ್ನು ನೆನಪು ಮಾಡಿ, ಇನ್ನೂ ಸ್ವಲ್ಪ ಕಾಲಾವಕಾಶವನ್ನು ಕೊಡುವುದಕ್ಕೂ, ಮತ್ತು ಸಮಸ್ಯೆಗೆ ಸಂಬಂಧಪಟ್ಟ ಬಡ ಆಗಮೆದಾರರನ್ನು ಸಂಘಟಿಸಿ ಅವಶ್ಯಬಿದ್ದಲ್ಲಿ ದೀರ್ಘಕಾಲದ ಹೋರಾಟ ನಡೆಸಲು ತಯ್ಯಾರಿ ನಡೆಸುವುದಕ್ಕೂ ತಾರೀಖು 15-6-83ರಂದು ವಿಭಾಗೀಯ ಸಮ್ಮೇಳನವನ್ನು ನಡೆಸಲಾಯ್ತು. ಪುತ್ತೂರಿನಲ್ಲಿ ಎನ್. ಜಿ. ಓ. ಭವನದಲ್ಲಿ ಬೆಳಿಗ್ಗೆ 11 ಗಂಟೆಯಿಂದ ಸಂಜೆ 5 ಗಂಟೆ ತನಕ ನಡೆದ ಬಡ ದರ್ಖಾಸ್ತುದಾರರ ಸಮ್ಮೇಳನಕ್ಕೆ ಮೂರು ತಾಲ್ಲೂಕುಗಳಿಂದ ಆರುನೂರಕ್ಕೂ ಮೇಲ್ಪಟ್ಟು ಪ್ರತಿನಿಧಿಗಳು ಬಂದಿದ್ದರು.

ಸಮ್ಮೇಳನವನ್ನು ಉದ್ಘಾಟಿಸಿದ ಸಿ. ಪಿ. ಐ. (ಎಂ) ರಾಜ್ಯ ಸಮಿತಿ ಕಾರ್ಯದರ್ಶಿ, ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಹಾಗೂ ಶಾಸಕ ಕಾ। ಪಿ. ರಾಮಚಂದ್ರರಾವ್ ಅವರು ಸಮಸ್ಯೆಯ ಗಂಭೀರತೆಯನ್ನು ತಿಳಿದ ತಾನು ಪ್ರಶ್ನೆಯ ಪರಿಹಾರಕ್ಕಾಗಿ ವಿಧಾನ ಸಭೆಯ ಒಳಗೆ ಹೋರಾಡಿ ಜನತಾ ಸರಕಾರದ ಮೇಲೆ ಒತ್ತಾಯ ಹೇರುವುದಾಗಿ ಹೇಳಿದರು. ಸರಕಾರದಿಂದ ಬೇಡಿಕೆ ಈಡೇರುವುದೆಂಬ ಭ್ರಮೆಯನ್ನು ಇರಿಸದೆ ಹೋರಾಟಕ್ಕೂ ತಯಾರಾಗಲು ಕರೆ ಇತ್ತ ರಾಮಚಂದ್ರರಾಯರು ತಾನೂ ಹೋರಾಟದಲ್ಲಿ ನಿಮ್ಮೊಂದಿಗಿರುವೆನೆಂದು ಸಾರಿದರು. ಹೋರಾಟ ಸಮಿತಿಯ ಉಪಾಧ್ಯಕ್ಷ ಕಾ। ಬಿ. ರಾಮಕೃಷ್ಣನವರಿಂದ ಸ್ವಾಗತ ಭಾಷಣವಾದ ಬಳಿಕ ಸಮ್ಮೇಳನ ಪ್ರಾರಂಭವಾಗಿತ್ತು. ರೈತ–ಕಾರ್ಮಿಕ ಮುಂದಾಳುಗಳಾದ ಸುಳ್ಯದ ಕಾ। ಸೂರ್ಯನಾರಾಯಣಭಟ್, ಪುತ್ತೂರಿನ ಕಾ। ತಂಬನ್ ಮತ್ತು ಬೆಳ್ತಂಗಡಿಯ ಕಾ। ಕೆ. ವಿ. ರಾವ್ ಅವರಿಂದ ಸೇರಿದ ಅಧ್ಯಕ್ಷ ಮಂಡಲಿಯು ಸಮ್ಮೇಳನವನ್ನು ನಡೆಸಿ ಕೊಟ್ಟಿತು.

ಉದ್ಘಾಟನೆಯಾದ ಬಳಿಕ ಸಮಸ್ಯೆಯ ಪ್ರಸ್ತಾವನೆಮಾಡಿ ಮುಖ್ಯ ಮಂತ್ರಿಯವರಿಗೆ ಕಳುಹಿಸಲು ತಯಾರಿಸಿರುವ ಮನವಿಯನ್ನು ಹೋರಾಟ ಸಮಿತಿಯ ಅಧ್ಯಕ್ಷ ಕಾ। ಎಂ. ಕೆ. ಭಟ್ ಮಂಡಿಸಿದರು. "ಬಡ ಜನರ ಸ್ವಾಧೀನವಿರುವ ಸರಕಾರಿ ಭೂಮಿಯನ್ನು ಅದು ಎಲ್ಲೇ ಇದ್ದರೂ ಅಂದರೆ ಅದು ಫಾರೆಸ್ಟ್ ಅಥವಾ ಮೈನರ್ ಫಾರೆಸ್ಟ್‌ನೊಳಗಿದ್ದರೂ, ಫಾರೆಸ್ಟ್ ಗಡಿಯಲ್ಲಿದ್ದರೂ, ಮುನಿಸಿಪಾಲಿಟಿ ಒಳಗೆ ಇದ್ದರು, ಶ್ರೀಮಂತರ ಕುಮ್ಕಿ ಭೂಮಿಯಾಗಿದ್ದರು) ಮತ್ತು ಯಾವಾಗಲಿನಿಂದಲೇ ಇದ್ದರೂ ಅವರವರಿಗೆ ಧರ್ಮಾರ್ಥವಾಗಿ ಖಾಯಂಗೊಳಿಸಿ ಉಚಿತವಾಗಿ ಹಕ್ಕುಪತ್ರವನ್ನು ಕೊಡಬೇಕು. ಹೊಸದಾಗಿ ಅರ್ಜಿ ಸಲ್ಲಿಸಲು 1988 ಜನವರಿ 8ರ ತನಕ ಅವಕಾಶ ಕೊಡಬೇಕು. ರೈತ ಸಂಘದ ಮತ್ತು ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ಸೇರಿಸಿ ಭೂ ವಿತರಣಾ (ದರ್ಖಾಸ್ತು) ಸಮಿತಿಗಳನ್ನು ಪುನರ್ರಚಿಸಬೇಕು" ಎಂಬ ಬೇಡಿಕೆಯು ಮನವಿಯ ಕೊನೆಯಲ್ಲಿದ್ದು, ನಿರ್ದಿಷ್ಟ ಹಾಗೂ ಸ್ಪಷ್ಟ ಕ್ರಮ ತೆಗೆದುಕೊಂಡು ಬೇಡಿಕೆ ಈಡೇರಿಸಲು ಸರಕಾರಕ್ಕೆ ಎರಡು ತಿಂಗಳುಗಳ ಕಾಲಾವಕಾಶವನ್ನೂ ಕೊಡಲಾಗಿದೆ. ಆಗಸ್ಟ್ 15ರೊಳಗೆ ಸರಕಾರದ ವತಿಯಿಂದ ಬೇಡಿಕೆ ಈಡೇರಿಸುವತ್ತ ಏನೊಂದೂ ಸ್ಪಷ್ಟ ಉತ್ತರವಿಲ್ಲವಾದರೆ ಚಳುವಳಿಯ ಮಾರ್ಗವನ್ನು ಅನುಸರಿಸದೆ ಬೇರೆ ದಾರಿ ಇಲ್ಲ ಎಂದೂ ಸರಕಾರವನ್ನು ಎಚ್ಚರಿಸಲಾಗಿದೆ. ಮನವಿಗೆ ಬೆಂಬಲಿತವಾಗಿ ಕಾ. ವಿಲ್‌ಫ್ರೆಡ್, ಕಾ। ಮೋನಪ್ಪ ಗೌಡ ಮೊದಲಾದವರು ಮಾತನಾಡಿದ ಬಳಿಕ ಪ್ರಚಂಡ ಕರತಾಡನದೊಂದಿಗೆ ಸಮ್ಮೇಳನವು ಮನವಿಯನ್ನು ಅಂಗೀಕರಿಸಿತು. ಆ ಬಳಿಕ ಹತ್ತು ಮಂದಿಯ ಶಿಷ್ಟ ಮಂಡಳಿಯು ಉಪ ವಿಭಾಗಾಧಿಕಾರಿಯವರಲ್ಲಿಗೆ ಹೋಗಿ ಮನವಿಯನ್ನು ಮುಖ್ಯ ಮಂತ್ರಿಯವರಿಗೆ ಕಳುಹಿಸುವಂತೆ ಹೇಳಿ ಅಲ್ಲಿ ಕೊಟ್ಟಿತು. ಅದೇ ಸಮಯದಲ್ಲಿ ಪ್ರತಿನಿಧಿಗಳೂ ಮತ್ತು ರಸ್ತೆ ಯುದ್ದಕ್ಕೂ ಸೇರಿಕೊಂಡ ರೈತ–ಕಾರ್ಮಿಕರೂ ಸೇರಿದಂತೆ ಸಹಸ್ರ ಜನಕ್ಕಿಂತಲೂ ಹೆಚ್ಚಿಗೆ ಭಾಗವಹಿಸಿದ್ದ ಮೆರವಣಿಗೆಯು ಪುತ್ತೂರಿನ ಮುಖ್ಯ ಬೀದಿಗಳಲ್ಲಿ ಸಂತ್ತಾಡಿ ತಮ್ಮ ಅಹವಾಲನ್ನೂ ಹೋರಾಟದ ನಿರ್ಧಾರವನ್ನೂ ಜನತೆಗೆಹೇಳಿತು.

ಮಧ್ಯಾಹ್ನದ ಮೇಲೆ 3 ಗಂಟೆಗೆ ಪ್ರಾರಂಭವಾದ ಅಧಿವೇಶನದ ಮೊದಲಲ್ಲಿ ಕಾ। ಎಂ. ಕೆ. ಯವರು ಎರಡು ತಿಂಗಳುಗಳೊಳಗೆ ಸರಕಾರವು ಬೇಡಿಕೆ ಈಡೇರಿಸುವತ್ತ ನಿರ್ದಿಷ್ಟ ಹಾಗೂ ಸ್ಪಷ್ಟ ಕ್ರಮವಹಿಸದಿದ್ದಲ್ಲಿ ಹಂತ ಹಂತವಾಗಿ ದೀರ್ಘಕಾಲದ ಹೋರಾಟ ನಡೆಸುವುದರ ಬಗ್ಗೆ ಹೋರಾಟ ಸಮಿತಿಯ ಅಭಿಪ್ರಾಯಗಳನ್ನು ಮಂಡಿಸಿದರು. ತಾಲ್ಲೂಕು ಕೇಂದ್ರಗಳಲ್ಲಿ ಸಾಮೂಹಿಕ ಸತ್ಯಾಗ್ರಹ, ಗ್ರಾಮ ಗ್ರಾಮಗಳಿಂದ ಜಾತಾ ಬಂದು ತಾಲ್ಲೂಕು ಕೇಂದ್ರಗಳಲ್ಲಿ ಸತ್ಯಾಗ್ರಹ, ತಾಲ್ಲೂಕು ಕೇಂದ್ರಗಳಲ್ಲಿ ಸಾಮೂಹಿಕ ಪಿಕೆಟಿಂಗ್, ಜಿಲ್ಲೆಯಾದ್ಯಂತ ಸೌಹಾರ್ದ ಕಾರ್ಯಕ್ರಮ, ಬಂದ್ ಮತ್ತು ಆಮರಣ ಉಪವಾಸ ಸತ್ಯಾಗ್ರಹ ಮತ್ತು ಇನ್ನೂ ತೀವ್ರ ರೀತಿಯ ಚಳವಳಿ ನಡೆಸಬೇಕಾಗಬಹುದೆಂದೂ, ಬೇಡಿಕೆ ಈಡೇರುವ ತನಕ ಹೋರಾಟ ನಡೆಸಲು ತಯ್ಯಾರಿರಬೇಕೆಂದೂ ಎಂ. ಕೆ. ಯವರು ಹೇಳಿದರು.

ಪಾಣಾಜೆ ಗ್ರಾಮದ ವೆಂಕಪ್ಪನಾಯ್ಕ ಕಬಕದ ಸಿ. ಎಂ. ಏತಲ್, ಜಾಲ್ಸೂರಿನ ಎ. ವಿಶ್ವನಾಥಗೌಡ, ತೊಡಿಕ್ಕಾನದ ಮುತ್ತಡ್ಕ ರಾಮಯ್ಯಗೌಡ, ಉಜಿರೆಯ ಕತ್ತೋಡಿ ಹರಿಜನ, ದೊಡ್ಡ ತೋಟದ ಭಾಸ್ಕರ್‌ರಾವ್, ನಿಡುವಳ್ಳಿಯ ಚೋಮ, ದೇವಚಳ್ಳದ ಬಾಲಕೃಷ್ಣ ಗೌಡ ಬೆಳ್ತಂಗಡಿಯ ವಿಷ್ಣುಮೂರ್ತಿ, ಬಜತ್ತೂರಿನವರಾದ ವಿಲ್‌ಫ್ರೆಡ್ ಮೊದಲಾದವರು ಬಡ ದರ್ಖಾಸ್ತುದಾರ ಮೇಲಿನ ಅನ್ಯಾಯವನ್ನು ಉದಾಹರಣೆ ಸಮೇತ ವಿವರಿಸಿ ಹೋರಾಟದ ದಾರಿಗೆ ಬೆಂಬಲ ಸೂಚಿಸಿದರು,

ಸಮ್ಮೇಳನದಲ್ಲಿ ಭಾಗವಹಿಸಿದ್ದ ಸಿ. ಪಿ. ಐ. (ಎಂ) ಜಿಲ್ಲಾ ಕಾರ್ಯದರ್ಶಿ ಕಾ। ಕೆ. ಆರ್. ಶ್ರೀಯಾನ್ ಮತ್ತು ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾ। ಯು. ಜನಾರ್ಧನನ್ನಾಯ್ಕ್‌ರು ಮಾತನಾಡಿ, ಸಮ್ಮೇಳನವು ಚಾರಿತ್ರಿಕವಾದುದೆಂದು ಹೇಳಿ ಭೂಮಿ ಖಾಯಂ ಮಾಡುವ ಪ್ರಶ್ನೆಯು ಜಿಲ್ಲೆಯಾದ್ಯಂತ ಇದ್ದು, ಮುಂದೆ ನಡೆಯತಕ್ಕ ಹೋರಾಟಗಳಿಗೆ ಜಿಲ್ಲೆಯಾದ್ಯಂತ ಸೌಹಾರ್ದ ಬೆಂಬಲವನ್ನು ಸಂಘಟಿಸುವುದಾಗಿ ಘೋಷಿಸಿದರು. ರಾಜ್ಯದಾದ್ಯಂತ ಇರುವ ಪ್ರಶ್ನೆಯು ಇದಾದುದರಿಂದ ಹೋರಾಟ ಸಮಿತಿಯು ಹಾಕಿಕೊಂಡ ಕಾರ್ಯಕ್ರಮಕ್ಕೆ ರಾಜ್ಯದಾದ್ಯಂತ ಬೆಂಬಲ ಸಂಘಟಿಸಲು ತಾವು ಶ್ರಮಿಸುವುದಾಗಿ ಕಾ। ಪಿ. ರಾಮಚಂದ್ರರಾಯರು ಹೇಳಿದರು.

ಹೋರಾಟ ಸಮಿತಿ ಅಧ್ಯಕ್ಷ ಎಂ. ಕೆ. ಯವರು ಸಮಾರೋಪ ಭಾಷಣ ಮಾಡಿ ಮುಂದೆ ನಡೆಸಬೇಕಾಗಬಹುದಾದ ಹೋರಾಟಕ್ಕೆ ಸಜ್ಜಾಗಲು ಕರೆ ಇತ್ತು, ಹೋರಾಟದ ರೂಪ ರೇಷೆಗಳನ್ನೂ ತೀರ್ಮಾನಿಸಲು ಹೋರಾಟ ಸಮಿತಿಗೆ ಅಧಿಕಾರ ಕೊಡಲು ವಿನಂತಿಸಿದಾಗ ಪ್ರತಿನಿಧಿಗಳು ಪ್ರಚಂಡ ಕರತಾಡನದೊಂದಿಗೆ ಅದಕ್ಕೆ ತಮ್ಮ ಒಪ್ಪಿಗೆ ಇತ್ತರು. ಅಧ್ಯಕ್ಷ ಮಂಡಲಿಯ ಸಂಗಾತಿಗಳು ಸಮಾರೋಪ ಭಾಷಣಗಳನ್ನು ಮಾಡಿದ ಬಳಿಕ ಧನ್ಯವಾದ ಕೊಡುವುದರೊಂದಿಗೆ ಸಮ್ಮೇಳನವು ಮುಕ್ತಾಯವಾಯಿತು.

ಸರಕಾರದ ಉತ್ತರವೇನೆಂದು ಕಾದು ನೋಡುತ್ತಿರುವಾಗಲೇ ಹಳ್ಳಿ ಹಳ್ಳಿಗೆ ಹೋಗಿ ಸಂಬಂಧಪಟ್ಟ ಬಡ ಜನತೆಯನ್ನು ಸಂಘಟಿಸಿ ಮುಂದೆ ನಡೆಸಬೇಕಾಗಬಹುದಾದ ಹೋರಾಟಗಳಿಗೆ ಸಜ್ಜುಗೊಳಿಸಲು ಹೋರಾಟ ಸಮಿತಿಯು ಕಾರ್ಯಕ್ರಮ ಹಾಕಿಕೊಳ್ಳಲಿದೆ. ರಾಜ್ಯದಾದ್ಯಂತ ಇರುವ ಪ್ರಶ್ನೆಯ ಬಗ್ಗೆ ಈ ಪ್ರದೇಶದಲ್ಲಿ ನಡೆಯುವ ಹೋರಾಟಕ್ಕೆ ರಾಜ್ಯದಾದ್ಯಂತ ಸೌಹಾರ್ದ ಬೆಂಬಲ ಬೇಕಿದೆ. ರಾಜ್ಯದಾದ್ಯಂತ ಹೋರಾಟವು ಬೆಳೆಯುವುದೂ ಅವಶ್ಯವಿದೆ.

ಬಿರ್ಲಾ ಗಿರಣಿ ಕಾರ್ಮಿಕರಿಗೆ

ದ್ರೋಹ ಬಗೆದವರು ಯಾರು?

ದೆಹಲಿಯ ಬಿರ್ಲಾ ಕಾಟನ್ ಅಂಡ್ ಸ್ಪಿನ್ನಿಂಗ್ ಮಿಲ್ಸ್‌ನ ಆಡಳಿತ ವರ್ಗ ಹಾಗೂ ಸಿ. ಐ. ಟಿ. ಯು. ಗೆ ಸೇರಿದ ಕಪಡಾ ಮಜದೂರ್ ಲಾಲ್ ಝಂಡಾ ಯೂನಿಯನ್ ಹಾಗೂ ಟೆಕ್ಸ್‌ಟೈಲ್ ಮಜದೂರ್ ಕಾಂಗ್ರೆಸ್ ನಡುವೆ ಇತ್ತೀಚೆಗೆ ಒಂದು ಒಪ್ಪಂದಕ್ಕೆ ಸಹಿಹಾಕಲಾಯಿತು. ಈ ಬಗ್ಗೆ ದೆಹಲಿಯಲ್ಲಿ ಎ. ಐ. ಟಿ. ಯು. ಸಿ. ನವದೆಹಲಿಯ ಪ್ರಧಾನ ಕಾರ್ಯದರ್ಶಿಯಾದ ಬಿ. ಡಿ. ಜೋಶಿ ಸುಳ್ಳು, ಅರೆಸತ್ಯ, ದೂಷಣೆಗಳಿಂದ ಕೂಡಿದ ಲೇಖನವೊಂದನ್ನು ಜೂನ್ 5ರ "ನ್ಯೂ ಏಜ್" ನಲ್ಲಿ ಬರೆದಿದ್ದಾರೆ. ಆ ಲೇಖನದಲ್ಲಿ ಅವರು "ಸಿ. ಐ. ಟಿ. ಯು. ನ ಕೇಂದ್ರ ನಾಯಕರೊಬ್ಬರನ್ನು ಹಾಗೂ "ಪಶ್ಚಿಮ ಬಂಗಾಲ ಸಿ. ಐ. ಟಿ.ಯು.ನಾಯಕತ್ವವನ್ನು ಅಸಂಬದ್ಧ ದೂಷಣೆ ಮಾಡುವ ಕೀಳು ಮಟ್ಟಕ್ಕೆ ಇಳಿದಿದ್ದಾರೆ.

ಜೋಶಿಯವರ ಸಿಟ್ಟಿಗೆ ಕಾರಣ ಹುಡುಕುವುದು ಸುಲಭ. ಯಾಕೆಂದರೆ ಇದುವರೆಗೆ ಬಟ್ಟೆ ಗಿರಣಿ ಆಡಳಿತ ವರ್ಗಗಳು ಕಡೆಯ ಗಳಿಗೆಯಲ್ಲಿ ಹೋರಾಟವನ್ನು ವಿರೋಧಿಸಿದ ಯೂನಿಯನ್‌ಗಳನ್ನು ಒಪ್ಪಂದಕ್ಕೆ ಸಹಿ ಹಾಕಲು ಕರೆಯುವುದು ವಾಡಿಕೆಯಾಗಿದ್ದು, ಅದರಿಂದಾಗಿ ಜೋಶಿಯವರ ಸಹಿಯಿಲ್ಲದೆ ಯಾವ ಒಪ್ಪಂದವೂ ನಡೆಯುತ್ತಿರಲಿಲ್ಲ. ಆದರೆ ಈ ಬಾರಿ ಪ್ರಪ್ರಥಮವಾಗಿ ಜೋಶಿಯವರಿಲ್ಲದೇ ಒಂದು ಒಪ್ಪಂದವಾಗಿರುವುದರಿಂದ ಅವರಿಗೆ ಎಲ್ಲಿಲ್ಲದ ಕೋಪ ಬಂದಿರುವುದು, ಅದನ್ನು "ನ್ಯೂ ಏಜ್"ನಲ್ಲಿ ಕಾರಿಕೊಂಡಿರುವುದು ಸ್ವಾಭಾವಿಕವೇ!

ಈ ಹಿಂದೆ 1973ರಲ್ಲಿ ದೆಹಲಿಯಲ್ಲಿ ಹೆಚ್ಚಿನ ತುಟ್ಟಿ ಭತ್ಯಕ್ಕಾಗಿ ಒಂದು ದೊಡ್ಡ ಹೋರಾಟ ನಡೆದಾಗ ಎ. ಐ. ಟಿ. ಯು. ಸಿ. 'ಏಕತಾ ಯೂನಿಯನ್' ಅದನ್ನು ಬಹಿರಂಗವಾಗಿಯೇ ವಿರೋಧಿಸಿತ್ತು. ಆದರೂ ಅಂತಿಮವಾಗಿ ಒಪ್ಪಂದಕ್ಕೆ ಸಹಿ ಬೀಳಲಿದ್ದಾಗ ಡಿ. ಸಿ. ಎಂ. ಬಳಗದ ಗಿರಣಿಗಳ ಮಾಲಿಕ ಭರತ್‌ರಾಮ್ ಜೋಶಿಯವರಿಲ್ಲದೆ ಒಪ್ಪಂದಕ್ಕೆ ಸಹಿ ಹಾಕಲಾರೆ ಎಂದಿದ್ದ. ಇಂತಹ ಕಾರ್ಮಿಕ–ವಿರೋಧೀ ಸಂಪ್ರದಾಯವನ್ನು ಈ ಸಲ ಮುರಿದಿರುವುದೇ ಜೋಶಿಯವರು ವಿವೇಕ ಶೂನ್ಯವಾಗಿ ಎಗರಾಡಲು ಕಾರಣ.

ರಿಟ್ರೆಂಚ್‌ಮೆಂಟ್ ನೀತಿಗೆ ಶರಣು

ಈಗ ಜೋಶಿಯವರ ಎಗರಾಟಕ್ಕೆ ಕಾರಣವಾದ ಸದ್ಯದ ಹೋರಾಟದ ವಿವರಗಳನ್ನು ಪರಿಶೀಲಿಸೋಣ. ಜುಲೈ 1982ರಲ್ಲಿ ಈ ವಿವಾದ ಆರಂಭವಾಯಿತು. ಬಿರ್ಲಾ ಗಿರಣಿಯ ಸೇಲ್ಸ್ ಹಾಗೂ ಅದಕ್ಕೆ ಸಂಬಂಧಿಸಿದ ವಿಭಾಗಗಳಲ್ಲಿ ಏನೇನೋ ನೆಪವೊಡ್ಡಿ ಕಾರ್ಮಿಕರ ಸಂಖ್ಯೆಯನ್ನು ಕಡಿತಗೊಳಿಸಲು, ಸುಮಾರು ಮೂರು ಸಾವಿರ ಕಾರ್ಮಿಕರನ್ನು ರಿಟ್ರೆಂಚ್‌ಮೆಂಟ್ ಮಾಡಲು ಆಡಳಿತ ವರ್ಗ ಬಯಸಿತ್ತು. ಈ ವಿಭಾಗಗಳ ಬದಲೀ ಕಾರ್ಮಿಕರಿಗೆ ಒಂದು ದಿನದ ಕೆಲಸವನ್ನೂ ಕೊಟ್ಟಿರಲಿಲ್ಲ. ಕಾರ್ಮಿಕರು ಎದುರಿಸುತ್ತಿದ್ದ ಮುಖ್ಯ ಸಮಸ್ಯೆಯಿದು.

ಎ. ಐ. ಟಿ. ಯು. ಸಿ. ಹಾಗೂ ಸಿ.ಐ.ಟಿ.ಯು. ಈ ಸಮಸ್ಯೆಯ ಬಗ್ಗೆ ತಳೆದ ನಿಲುವಿನಲ್ಲಿ ಆರಂಭದಿಂದಲೇ ಬಹಳ ವ್ಯತ್ಯಾಸವಿತ್ತು. ಎ. ಐ. ಟಿ. ಯು. ಸಿ. ಯು "ಕಣ್ಣೀರಿಲ್ಲದ ಹೊಂದಾಣಿಕೆ"ಯೆಂಬ ಕುಪ್ರಸಿದ್ಧ ಡಾಂಗೆ ಘೋಷಣೆಯ ಪ್ರಕಾರ ಈ ರೀತಿಯ "ಉದ್ಯೋಗ ಹೀನತೆ"ಯ ವಿರುದ್ಧವೇ ಹೋರಾಡುವ ಬದಲು ಉದ್ಯೋಗ ಕಳೆದುಕೊಳ್ಳುವವರಿಗೆ ಪರಿಹಾರ ಕೊಡುವುದಕ್ಕೇ ಹೆಚ್ಚು ಒತ್ತು ನೀಡುತ್ತಿತ್ತು. ಆದರೆ ಸಿ. ಐ. ಟಿ. ಯು. ಇದನ್ನು ವಿರೋಧಿಸಿ ರಿಟ್ರೆಂಚ್‌ಮೆಂಟ್ ವಿರುದ್ಧವೇ, ಜುಲೈ 1982 ರಲ್ಲಿ ಗಿರಣಿಯಲ್ಲಿ ಕೆಲಸಕ್ಕಿದ್ದ ಎಲ್ಲರನ್ನೂ ಹಾಗೆಯೇ ಮುಂದುವರಿಸಬೇಕೆಂದು ಹೋರಾಟ ಆರಂಭಿಸಿತು. ಈ ಹೋರಾಟ ಜೋಶಿಯವರ "ಏಕತಾ ಯೂನಿಯನ್" ವಿರೋಧವನ್ನು ಎದುರಿಸಿಯೂ ನಡೆಯಿತಾದರೂ, ಅದನ್ನು ಮರೆಮಾಚಿ ಜೋಶಿಯವರು ತಮ್ಮಿಂದಾಗಿಯೇ ಹೋರಾಟ ಆರಂಭವಾಯಿತು ಎಂದು ತನ್ನ ಲೇಖನದಲ್ಲಿ ಹೇಳಿದ್ದಾರೆ. ಆದರೆ ಈ ಸಮಸ್ಯೆಯ ಬಗ್ಗೆ ಅವರ ಹಾಗೂ ಎ. ಐ. ಟಿ. ಯು. ಸಿ. ಯ ನಿಲುವು ಅವರು ಸುಳ್ಳು ಹೇಳುತ್ತಿದ್ದಾರೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ರಿಟ್ರೆಂಚ್‌ಮೆಂಟ್ ವಿರುದ್ಧ ಈ ಹೋರಾಟ ದಿಲ್ಲೀ ನಗರಾಡಳಿತ ಗಿರಣಿಯ ಆಡಳಿತ ವರ್ಗಕ್ಕೆ ನೀಡಿದ ಬೆಂಬಲದಿಂದಾಗಿ ಐದು ತಿಂಗಳವರೆಗೂ ಮುಂದುವರೆಯಿತು. ಈ ಅವಧಿಯಲ್ಲಿ ಬದಲೀ ಕಾರ್ಮಿಕರಿಗೆ ಒಂದು ದಿನದ ಕೆಲಸವೂ ದೊರೆಯಲಿಲ್ಲ; ಖಾಯಂ ಕಾರ್ಮಿಕರಿಗೆ ಲೇ–ಆಫ್ ಪರಿಹಾರವೂ ದೊರೆಯಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ., ಬಿ.ಎಮ್. ಎಸ್., ಎಚ್. ಎಮ್. ಎಸ್. ಸಂಘಗಳು ಹಾಗೂ ಲಲಿತ್ ಮಾಕೆನ್ ನೇತೃತ್ವದ ಟೆಕ್ಸ್‌ಟೈಲ್ ಮಜ್ದೂರ್ ಸಂಘಗಳು ಸೇರಿ ಸಂಯುಕ್ತ ಕ್ರಿಯಾಸಮಿತಿ ರಚಿಸಿ ದೆಹಲಿಯ ಎಲ್ಲಾ ಗಿರಣಿಗಳಲ್ಲಿ ಡಿಸೆಂಬರ್ 21ರಂದು ಒಂದು ದಿನದ ಮುಷ್ಕರ ನಡೆಸಿದವು. ಈ ಮುಷ್ಕರದ ನೋಟೀಸಿನಲ್ಲಿ ಬಿರ್ಲಾ ಗಿರಣಿಯಲ್ಲಿ ಒಂದು ದಿನದ ಈ ಮುಷ್ಕರವನ್ನು ಅನಿರ್ದಿಷ್ಟ ಮುಷ್ಕರವಾಗಿ ಪರಿವರ್ತಿಸುವ ಹಕ್ಕನ್ನು ಕ್ರಿಯಾಸಮಿತಿ ಕಾದಿರಿಸಿಕೊಂಡಿತ್ತು. ಈ ನೋಟಿಸಿಗೆ ಎ.ಐ.ಟಿ.ಯು.ಸಿ. ಸಹಿ ಹಾಕಿತ್ತಾದರೂ ಅದೇ ದಿನ ನಡೆದ ಕ್ರಿಯಾ ಸಮಿತಿಯ ಸಭೆಯಲ್ಲಿ ಬಿರ್ಲಾ ಗಿರಣಿ ಆಡಳಿತ ವರ್ಗ ಲಾಕೌಟ್ ಘೋಷಿಸುವ ಸಂಭವವಿರುವುದರಿಂದ ಅದು ತಮ್ಮ ಹೋರಾಟವನ್ನು ದಿಕ್ಕುಗೆಡಿಸದಂತೆ ಮಾಡಲು ಅನಿರ್ದಿಷ್ಟ ಮುಷ್ಕರ ಆರಂಭಿಸಬೇಕೆಂಬ ವಾದ ಮುಂದಿಟ್ಟಾಗ ಜೋಶಿಯವರು ಈ ಬಗ್ಗೆ ಯೋಚಿಸಲು ಇನ್ನಷ್ಟು ದಿನಗಳು ಬೇಕು ಎಂಬ ನೆಪವೊಡ್ಡಿ ಅನಿರ್ದಿಷ್ಟ ಮುಷ್ಕರವನ್ನು ಕೆಲವು ದಿನ ಮುಂದೂಡುವಂತೆ ಮಾಡಿದರು. ಅವರು ಹೋರಾಟವನ್ನು ಬುಡಮೇಲು ಮಾಡಲು ಈ ಉಪಾಯ ಮಾಡಿದ್ದರೆಂದು ಮರುದಿನ ಬಿರ್ಲಾ ಗಿರಣಿಯ ಆಡಳಿತವರ್ಗ ಬೀಗಮುದ್ರೆ ಘೋಷಿಸಿದಾಗಲೇ ಸ್ಪಷ್ಟವಾಯಿತು. ಈ ಸಂದರ್ಭದಲ್ಲೂ ಸಂಯುಕ್ತ ಕ್ರಿಯಾ ಸಮಿತಿ ಅಂಗವಾಗಿದ್ದ ಏಕತಾ ಯೂನಿಯನ್‌ನ ಜೋಷಿಯವರು ಸಮಿತಿಯನ್ನು ಕೇಳದೆಯೇ ಕಾಂಗ್ರೆಸ್ (ಐ) ಎಂ. ಪಿ. ಯಾದ ಜಗದೀಶ್ ಟೈಟ್ಲರ್ ಮಧ್ಯಪ್ರವೇಶಿಸುವಂತೆ ಪ್ರಯತ್ನ ನಡೆಸಲಾರಂಭಿಸಿದರು. ಈ ಎಂ.ಪಿ. ಗೆ ಕೆ. ಕೆ. ಬಿರ್ಲಾರವರೊಂದಿಗೆ ನೇರ ಸಂಪರ್ಕವಿದೆ ಎಂಬುದು ಎಲ್ಲರಿಗೂ ತಿಳಿದ ವಿಷಯ.

ಚುನಾವಣಾ ಸ್ಟಂಟಾಗಿ ಅಷ್ಟರಲ್ಲೇ ನಡೆಯಲಿದ್ದ ದೆಹಲಿ ನಗರಸಭೆ ಚುನಾವಣೆಯಲ್ಲಿ ಬಿರ್ಲಾ ಗಿರಣಿಕಾರ್ಮಿಕರ ಮತಗಳಿಸಲು ಬೀಗಮುದ್ರೆಯನ್ನು ತೆರವು ಮಾಡಲಾಯಿತು. ಆದರೆ ಇದರಿಂದ ಪರಿಸ್ಥಿತಿ ಸುಧಾರಿಸುವ ಬದಲು ಮತ್ತಷ್ಟು ಹದಗೆಟ್ಟಿತು. ಖಾಯಂ ನೌಕರರ ಕೆಲಸದ ಭಾರ ಹೆಚ್ಚಿಸಲಾಯಿತು. ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಿ ಗಿರಣಿಯಿಂದ ಅಂತಿಮ ಪರಿಹಾರ ಪಡೆಯುವಂತೆ ಕಾರ್ಮಿಕರ ಮೇಲೆ ವಿಪರೀತ ಒತ್ತಡ ಬರಲಾರಂಭಿಸಿತು. ಈ ಸನ್ನಿವೇಶದಲ್ಲಿ ಜೋಷಿಯವರ ಏಕತಾ ಯೂನಿಯನ್ ಪ್ರತಿನಿಧಿಗಳು ಕ್ರಿಯಾ ಸಮಿತಿಯ ನಿಯಮಾವಳಿಯನ್ನು ಉಲ್ಲಂಘಿಸಿ ಆಡಳಿತವರ್ಗದೊಡನೆ ಪ್ರತ್ಯೇಕ ಮಾತುಕತೆ ನಡೆಸಿ ಕಾರ್ಮಿಕರು ರಾಜೀನಾಮೆ ಕೊಡುವಂತೆ ಪ್ರೋತ್ಸಾಹಿಸುವುದಾಗಿ ಆಡಳಿತವರ್ಗಕ್ಕೆ ಒಪ್ಪಿಗೆ ನೀಡಿದರು.

ಸಂಯುಕ್ತ ಹೋರಾಟವನ್ನು ಮುರಿದರು

ಅಲ್ಲದೆ ಜೋಶಿಯವರ ಯೂನಿಯನ್ ಸಂಯುಕ್ತ ಹೋರಾಟದಿಂದ ದೂರ ಸರಿಯಿತು. ಇದಕ್ಕೆ ಅದು ಕೊಟ್ಟ ನೆಪ ಟೆಕ್ಸ್‌ಟೈಲ್ ಮಜದೂರ್ ಸಂಘದ ನಾಯಕ ಲಲಿತ್ ಮಾಕೇನ್‌ರೊಂದಿಗೆ ಸಂಯುಕ್ತ ಹೋರಾಟಕ್ಕೆ ಬರಲಾಗುವುದಿಲ್ಲ ಎಂದು. ಆದರೆ ವಾಸ್ತವತೆಯೇನೆಂದರೆ ಗಿರಣಿಯಲ್ಲಿ ಇತ್ತೀಚಿಗೆ ನಡೆದ ಚುನಾವಣೆಗಳಲ್ಲಿ ಲಲಿತ್ ಮಾಕೆನ್‌ರ ಸಂಘ ಪ್ರಥಮ ಸ್ಥಾನ ಗಳಿಸಿತ್ತು. ಈ ರೀತಿ ಜಂಟೀ ಹೋರಾಟವನ್ನು ಬುಡಮೇಲು ಮಾಡಿದವರು ಎ.ಐ.ಟಿ.ಯು.ಸಿ. ಯೂನಿಯನ್‌ನವರು.

ಈ ನಡುವೆ ನೂರಾರು ಬದಲೀ ಕಾರ್ಮಿಕರಿಗೆ ಆಡಳಿತವರ್ಗ ವಜಾ ನೋಟೀಸು ಕೊಟ್ಟಿತು; ಹಲವಾರು ಖಾಯಂ ನೌಕರರನ್ನು ನಿವೃತ್ತಿಗೊಳಿಸಿತು. ಮಾಕೆನ್ ಅನಿರ್ದಿಷ್ಟ ಮುಷ್ಕರಕ್ಕೆ ಕರೆ ನೀಡಿದರು. ಮಾಕೆನ್‌ರ ಈ ರೀತಿಯ ಕಾರ್ಯಶೈಲಿಯನ್ನು ವಿರೋಧಿಸಿದರೂ ಸಿ.ಐ.ಟಿ.ಯು. ಮುಷ್ಕರಕ್ಕೆ ಕರೆ ನೀಡಿತು. ಎ.ಐ.ಟಿ.ಯು.ಸಿ. ಅಧಿಕೃತ ಇಂಟಕ್ ಯೂನಿಯನ್ ನೊಡನೆ ಸೇರಿಕೊಂಡು ಮುಷ್ಕರವನ್ನು ವಿಫಲಗೊಳಿಸಲು ಪ್ರಯತ್ನಿಸಿತು.

ಆದರೂ ಮಾರ್ಚಿ 2ರಿಂದ ಆರಂಭವಾದ ಮುಷ್ಕರ ಯಶಸ್ವಿಯಾಗಿ ನಡೆಯಿತು.

ಈ ನಡುವೆ ದೆಹಲಿಯ ಮುಖ್ಯ ಕಾರ್ಯಕಾರೀ ಕೌನ್ಸಿಲರ್ ಪ್ರಯತ್ನದ ಮೇರೆಗೆ ಮಾತುಕತೆ ಆರಂಭವಾದರೂ ಒಡಕುಂಟು ಮಾಡುವ ಎ.ಐ.ಟಿ.ಯು.ಸಿ. ಹಾಗೂ ಅಧಿಕೃತ ಇಂಟಕ್ ಯೂನಿಯನ್ ನಿಲುವುಗಳಿಂದಾಗಿ ಆಡಳಿತ ವರ್ಗ ಬಿಗಿ ನಿಲುವು ತಳೆಯಿತು.

ಸಿ.ಐ.ಟಿ.ಯು. ಸಂಘ ಹೋರಾಟ ಮುಂದುವರೆಸಿತು. ಸ್ವತಂತ್ರವಾಗಿ ಹಾಗೂ ಮಾಕೆನರ ಸಂಘದೊಂದಿಗೆ ಸೇರಿಕೊಂಡು ಹಲವಾರು ಧರಣಿ ಮುಷ್ಕರ ನಡೆಸಿತು. ಮೇ 10ರಂದು ಸಂಸತ್ತಿನೆದುರು ಪ್ರದರ್ಶನ ನಡೆಸಿ ಬಂಧನಕ್ಕೊಳಗಾದರು. ಅದೇ ದಿನ ಸಿ.ಪಿ.ಐ. (ಎಂ)ನ ಎಂ. ಪಿ., ಸೈಫುದ್ದೀನ್ ಚೌಧುರಿಯವರು ಈ ವಿಷಯವನ್ನು ಲೋಕಸಭೆಯಲ್ಲಿ ಎತ್ತಿದರು.

ಕೆಲವೇ ದಿನಗಳಲ್ಲಿ ಕೇಂದ್ರದ ಮಟ್ಟದಲ್ಲಿ ಮುಖ್ಯ ಉಪಕಾರ್ಮಿಕ ಕಮೀಶನರ್‌ರ ಮಧ್ಯಸ್ಥಿಕೆಯಿಂದ ಮಾತುಕತೆಗಳು ಮತ್ತೆ ಆರಂಭವಾದವು. ಆದರೆ ಈ ನಡುವೆ ಆಡಳಿತ ವರ್ಗ ಸೇಲ್ಸ್ ಹಾಗೂ ಸಂಬಂಧಿತ ವಿಭಾಗಗಳನ್ನು ಮುಚ್ಚುವ ಸುಮಾರು 3,000 ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕುವ ನೋಟೀಸು ಹೊರಡಿಸಿತ್ತು. ಇಂತಹ ಕಷ್ಟದ ಪರಿಸ್ಥಿತಿಯಲ್ಲಿ ಈ 3000 ಕಾರ್ಮಿಕರ ಕೆಲಸ ಉಳಿಸಲು ಸಿ.ಐ.ಟಿ.ಯು. ಕಾರ್ಯದರ್ಶಿ ಎಂ. ಕೆ. ಫಂದೆಯವರ ನೆರವು ಕೇಳಲಾಯಿತು. ಈ ಬಗ್ಗೆ ಜೋಶಿಯವರು ತಮ್ಮ ಲೇಖನದಲ್ಲಿ ಅಸಂಬದ್ಧ ಆಪಾದನೆ ಹೊರಿಸಿದ್ದಾರೆ. ಇದಕ್ಕೂ ಕಾರಣವಿದೆ. ಚೆಕ್ಸ್ ಮಾಕೋದ ಮಾಹೇಶ್ವರಿ ಎಂಬಾತನ ಬಾಯಿಂದ ಮಾತುಕತೆಯ ಒಂದು ಹಂತದಲ್ಲಿ "ಬಿರ್ಲಾ ಗಿರಣಿಯ ಮೂರು ಯೂನಿಯನ್‌ಗಳು ಮುಷ್ಕರ ನಡೆಸುವುದಿಲ್ಲವೆಂದು ಮಾತು ಕೊಟ್ಟಿದೆ" ಎಂಬ ಸತ್ಯ ಹೊರಬಿತ್ತು.

ಹೋರಾಟ ಮುಂದುವರಿಯುತ್ತದೆ

ವಾಸ್ತವ ಸ್ಥಿತಿ ಏನೆಂದರೆ ಆಡಳಿತ ವರ್ಗದ ನಿಲುವನ್ನು ಒಪ್ಪಲು ಏಕೆ ಸಾಧ್ಯವಿಲ್ಲವೆಂಬ ವಾದವನ್ನು ಮುಖ್ಯ ಕಾರ್ಮಿಕ ಕಮಿಷನರ್ ಅವರೂ ಸ್ವೀಕರಿಸುವಂತೆ ಮಾಡುವಲ್ಲಿ ಫಂದೆಯವರು ಯಶಸ್ವಿಯಾದುದರಿಂದಲೇ ಜುಲೈ 1982ರಲ್ಲಿ ಬಿರ್ಲಾ ಗಿರಣಿಯಲ್ಲಿ ಕೆಲಸಕ್ಕಿದ್ದ ಒಬ್ಬ ಕಾರ್ಮಿಕನೂ ಕೆಲಸದಿಂದ ವಜಾ ಆಗದಂತಹ ಒಪ್ಪಂದಕ್ಕೆ ಬರಲು ಸಾಧ್ಯವಾಯಿತು. ವಜಾ ನೋಟೀಸು ಪಡೆದವರೂ ಕೂಡಾ ಕೆಲಸದಲ್ಲಿ ಮುಂದುವರಿಯುವಂತಾಯಿತು. ಕೇವಲ ಜೋಷಿಯವರ ಯೂನಿಯನ್ನಿನ ಪ್ರೋತ್ಸಾಹದಿಂದ ರಾಜೀನಾಮೆ ನೀಡಿದವರು ಮಾತ್ರ ಕೆಲಸದಲ್ಲಿ ಮುಂದುವರಿಯಲು ಸಾಧ್ಯವಾಗಲಿಲ್ಲ. ಈಗ ಆಗಲಿರುವ ಒಪ್ಪಂದದ ಪ್ರಕಾರ

1 ವಿಭಾಗಗಳನ್ನು ಮುಚ್ಚುವ ನೋಟೀಸನ್ನು ಹಿಂತೆಗೆದುಕೊಳ್ಳಲಾಗುತ್ತದೆ,

2 ಈ ವಿಭಾಗಗಳ ಕಾರ್ಯನಿರ್ವಹಣೆ ಬಗ್ಗೆ ಇತ್ಯರ್ಥವಾಗುವವರೆಗೆ ಖಾಯಂ ನೌಕರರಿಗೆ ಲೇ–ಆಫ್ ಪರಿಹಾರ ದೊರೆಯುತ್ತದೆ.

3 ಒಂದು ದಿನದ ಕೆಲಸವನ್ನೂ ಪಡೆಯದಿದ್ದ ಬದಲೀ ಕಾರ್ಮಿಕರಿಗೆ ತಿಂಗಳಲ್ಲಿ ಹನ್ನೊಂದು ದಿನಗಳ ವೇತನ ದೊರೆಯುತ್ತದೆ.

ಅಲ್ಲದೆ ಆಡಳಿತ ವರ್ಗದ, ಯೂನಿಯನ್‌ಗಳ ಹಾಗೂ ದಕ್ಷಿಣ ಭಾರತ, ಮುಂಬೈ ಮತ್ತು ಅಹಮದಾಬಾದ್ ಬಟ್ಟೆ ಸಂಶೋಧನಾ ಸಂಸ್ಥೆಗಳ ಪ್ರತಿನಿಧಿಗಳ ಸಮಿತಿಯೊಂದು ಈ ವಿಭಾಗಗಳ ಕಾರ್ಯನಿರ್ವಹಣೆ ಬಗ್ಗೆ ವಿಚಾರಣೆ ನಡೆಸುತ್ತದೆ. ಈ ವಿಚಾರಣೆಯ ಫಲಿತಾಂಶದ ಬಗ್ಗೆ ಸಿ.ಐ.ಟಿ.ಯು.ಗೆ ಯಾವ ಭ್ರಮೆಯೂ ಇಲ್ಲ. ಆದರೂ ಜೋಶಿಯವರೇ ಒಪ್ಪಿಕೊಳ್ಳುವಂತೆ "ದೈಹಿಕ ಹಾಗೂ ಆರ್ಥಿಕ ಬಳಲಿಕೆ"ಯಿಂದ ನರಳುತ್ತಿರುವ ಕಾರ್ಮಿಕರಿಗೆ ಸ್ವಲ್ಪ ವಿಶ್ರಾಂತಿ ಪಡೆಯುವ ಅವಕಾಶ ಈಗ ದೊರೆತಂತಾಗಿದೆ. ಹೋರಾಟ ಮುಂದುವರಿಯುತ್ತದೆ. ಜೋಶಿಯವರ ಏಕತಾ ಯೂನಿಯನ್‌ನ ಚಟುವಟಿಕೆಗಳಿಂದ ಧೈರ್ಯಹೊಂದಿದ ಆಡಳಿತವರ್ಗ ಒಪ್ಪಂದವನ್ನೂ ಉಲ್ಲಂಘಿಸುವ ಪ್ರಯತ್ನ ನಡೆಸುತ್ತಿರುವುದರಿಂದಂತೂ ಈ ಹೋರಾಟ ಮುಂದುವರಿಯಲೇ ಬೇಕಾಗಿದೆ. ಆದರೆ ಈ ಹೋರಾಟದಲ್ಲಿ ಜೋಶಿಯವರ ಯೂನಿಯನ್‌ನಿಂದ ಸಹಾಯ ದೊರೆಯಲಾರದು ಎಂಬುದು ಬಿರ್ಲಾ ಗಿರಣಿಯ ಕಾರ್ಮಿಕರೆಲ್ಲರಿಗೂ ಕಳೆದ ಎಂಟು ತಿಂಗಳ ಅನುಭವದಿಂದ ಸ್ಪಷ್ಟವಾಗಿದೆ. ಜೋಶಿಯವರು ಸಿ.ಐ.ಟಿ.ಯು. ಕಾರ್ಮಿಕರಿಗೆ ವಿಶ್ವಾಸಘಾತ ಮಾಡಿದೆಯೆಂದು ಅಪಪ್ರಚಾರ ನಡೆಸುತ್ತಿದ್ದಾರೆ. ಆದರೆ ವಿಶ್ವಾಸಘಾತ ಮಾಡಿದವರು ಎ.ಐ.ಟಿ.ಯು.ಸಿ. ಯ ಏಕತಾ ಯೂನಿಯನ್ ಎಂಬುದು ಎಲ್ಲಾ ಬಿರ್ಲಾ ಗಿರಣಿ ಕಾರ್ಮಿಕರಿಗೂ ಗೊತ್ತಾಗಿದೆ.

ಆರ್. ಚಂದ್ರ

ಆರ್ಥಿಕ ಸಮೀಕ್ಷೆ:

ಕರ್ನಾಟಕದಲ್ಲಿ ಬರಗಾಲ ಪರಿಸ್ಥಿತಿ ಯಾಕೆ?

ಕರ್ನಾಟಕದಲ್ಲಿ ಇತ್ತೀಚಿಗಿನ ವರ್ಷಗಳಲ್ಲಿ ಒಂದಲ್ಲ ಒಂದು ಭಾಗದಲ್ಲಿ ಬರಗಾಲ ಪರಿಸ್ಥಿತಿ ಉಂಟಾಗುತ್ತಿದ್ದು ಜನರು ಅತೀವ ಕಷ್ಟ ನಷ್ಟಗಳಿಗೊಳಗಾಗುತ್ತಿದ್ದಾರೆ. ಈ ವರ್ಷವಂತೂ ರಾಜ್ಯದ ಹೆಚ್ಚಿನ ಪ್ರದೇಶಗಳಲ್ಲಿ ವ್ಯಾಪಕವಾಗಿರುವ ಬರಗಾಲ ಕ್ಷಾಮ ಪರಿಸ್ಥಿತಿಯಿಂದಾಗಿ ಜನಕೋಟಿಯಲ್ಲಿ ಹಾಹಾಕಾರ ಎದ್ದಿದೆ. ನೆಲ, ಜಲ, ಕಾಡು, ಪರ್ವತ, ಇತ್ಯಾದಿ ನೈಸರ್ಗಿಕ ಸಂಪತ್ ಸಮೃದ್ಧವಾದ ನಮ್ಮ ಕರುನಾಡಿನಲ್ಲಿ ಇಂತಹ ಬರಗಾಲದ ಪರಿಸ್ಥಿತಿಯಾಕೆ?

ಅಪಾರ ಜಲ ಸಂಪತ್ತು

ರಾಜ್ಯದ ಮೇಲ್ಮೈ ಹರಿನೀರಿನ ಸಂಪತ್ತು ಅಪಾರ, 3500 TMC ಚದರ ಅಡಿಗಳಷ್ಟು. ಅಂತರ್ಜಲ ಸಂಪತ್ತು 400 TMC ಚದರ ಅಡಿಗಳಷ್ಟು. ಪ್ರತ್ಯಕ್ಷ ಉದಾಹರಣೆಯಿಂದ ರಾಜ್ಯದ ಜಲ ಸಂಪತ್ತಿನ ಬೃಹತ್ ಪ್ರಮಾಣದ ಅರಿವು ಇನ್ನೂ ಸ್ಪಷ್ಟವಾಗುವುದು. ತುಂಗಭದ್ರಾ ಜಲಾಶಯದ ನೀರಿನ ಪ್ರಮಾಣ 130 TMC ಚದರ ಅಡಿಗಳು, ಮತ್ತು ಅದರ ಆಯಕಟ್ಟು ಪ್ರದೇಶ 10000 ಎಕರೆಗಳು. ರಾಜ್ಯದ ಒಟ್ಟು ಜಲ ಸಂಪತ್ತು ತುಂಗಭದ್ರಾ ಜಲಾಶಯದ 30 ಪಾಲಷ್ಟಾಗಿದೆ! ಇತರ ನದಿಗಳ ಜಲಾಶಯದ ಪ್ರಮಾಣ ಕೃಷ್ಣಾ 970 ಟಿಎಂಸಿ ಚದರ ಅಡಿಗಳು, ಕಾವೇರಿ 390 ಟಿಎಂಸಿ ಚದರ ಅಡಿಗಳು, ಗೋದಾವರಿ 50 ಟಿಎಂಸಿ ಚದರ ಅಡಿಗಳು. ಉ. ಪಿನಾಕಿನಿ ಮತ್ತು ಪಾಲಿರಿ 30 ಟಿಎಂಸಿ ಚದರ ಅಡಿಗಳು. ಪಶ್ಚಿಮಾಭಿಮುಖವಾಗಿ ಹರಿದು ಸಮುದ್ರ ಪಾಲಾಗುವ ನೀರು 2000 ಟಿಎಂಸಿ ಚದರ ಅಡಿಗಳು. ಸುಮಾರು 2/3ರಷ್ಟು ರಾಜ್ಯದ ಜಲ ಸಂಪತ್ತು ವ್ಯರ್ಥವಾಗಿ ಸಮುದ್ರ ಪಾಲಾಗುತ್ತಿದೆ. ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳನ್ನು ಪೂರ್ವಕ್ಕೆ ತಿರುಗಿಸುವ ಯೋಜನೆ ಹತ್ತುವರ್ಷಗಳಿಂದ ನೆನೆಗುದಿಗೆಬಿದ್ದಿದೆ. ಇಷ್ಟು ಜಲರಾಶಿಯಲ್ಲಿ ಕೆರೆ, ಕುಂಟೆ, ಬಾವಿ, ಮಧ್ಯಮ ಹಾಗೂ ಬೃಹತ್ ಜಲಾಶಯಗಳಿಂದ ಬಳಸುವ ನೀರಿನ ಪ್ರಮಾಣ ಕೇವಲ 700 ಟಿಎಂಸಿ ಚದರ ಅಡಿಗಳು, ಅಂದರೆ ಒಟ್ಟು ಜಲ ಸಂಪತ್ತಿನ ಐದನೇ ಒಂದಂಶ ಮಾತ್ರ.

ಅನುಭವದಿಂದ ತಿಳಿದು ಬರುವುದೇನೆಂದರೆ, ಬಾವಿ, ಕೆರೆ, ಕುಂಟೆಗಳ ಅಂತರ್ಜಲ ಮಿತವಾಗಿ ಉಪಯೋಗಿಸಲ್ಪಡುತ್ತದೆ. ಆದರೆ, ನದೀ ಕಾಲುವೆಗಳ ಮೂಲಕ ಸಿಗುವ ಮೇಲ್ಮೈ ಜಲ ಸಂಪತ್ತು ಅನವಶ್ಯಕವಾಗಿ ಪೋಲಾಗುತ್ತದೆ. ಉದಾ: ಭೂಮಿಯಲ್ಲಿ ಇಂಗಿ ಹೋಗುವುದು, ಬಿಸಿಲಿನಲ್ಲಿ ಆವಿಯಾಗಿ ಹೋಗುವುದು. ಅಲ್ಲಲ್ಲಿ ಸೋರಿ ಹೋಗುವುದು. ಅಗತ್ಯಕ್ಕಿಂತ ಹೆಚ್ಚು ಬಳಸುವುದು, ಇತ್ಯಾದಿ ಇತ್ತೀಚಿಗೆ ನೀರಾವರಿ ಪ್ರದೇಶಗಳಲ್ಲಿ ಭತ್ತ, ಕಬ್ಬು ಬೆಳೆಸುತ್ತಿರುವುದರಿಂದ ಅತಿ ನೀರಾವರಿ ಬೆಳೆಗಳಿಗೆ ಬೇಕಾಗುವ ನೀರಿಗಿಂತ 4–5 ಪಾಲು ಹೆಚ್ಚು ನೀರು ಖರ್ಚಾಗುವುದು.

ಕಡಿಮೆ ಬಳಕೆ

ರಾಜ್ಯದ ಭೂಭಾಗ 1.92 ಲಕ್ಷ ಚದರ ಕಿ. ಮೀ ಮತ್ತು 1981ರಲ್ಲಿ ಜನಸಂಖ್ಯೆ 3.70 ಕೋಟಿ. ಇವೆರಡರಲ್ಲಿಯೂ ದೇಶದ 22 ರಾಜ್ಯಗಳಲ್ಲಿ ಕರ್ನಾಟಕ 8ನೇ ಸ್ಥಾನ ಪಡೆದಿದೆ. ಶೇ 71ರಷ್ಟು ಜನ ಗ್ರಾಮ ನಿವಾಸಿಗಳು ಮತ್ತು ರಾಜ್ಯದ ಒಟ್ಟು ಉತ್ಪನ್ನದ ಶೇ 49ರಷ್ಟು ವ್ಯವಸಾಯ ಕ್ಷೇತ್ರದಿಂದ. ಆದುದರಿಂದ ರಾಜ್ಯದ ಆರ್ಥಿಕ ಅಭಿವೃದ್ಧಿ ವ್ಯವಸಾಯದ ಅಭಿವೃದ್ಧಿಯನ್ನನುಸರಿಸಿದೆ. ವ್ಯವಸಾಯದ ಅಭಿವೃದ್ಧಿ ಹೆಚ್ಚಾಗಿ ನೀರಾವರಿ ಸೌಕರ್ಯವನ್ನವಲಂಬಿಸಿದೆ. ನೀರಾವರಿಯ ಮೂಲಗಳು: ನದಿ ಕಾಲುವೆ, ಶೇ 50; ಬಾವಿ ಶೇ35 ಮತ್ತು ಇತರ ಶೇ15. ರಾಜ್ಯದಲ್ಲಿ ಒಟ್ಟು 56 ಲಕ್ಷ ಹೆಕ್ಟೇರು ಭೂಮಿಗೆ ನೀರಾವರಿ ಸೌಕರ್ಯ ಒದಗಿಸುವ ತುಂಬು ಸಾಮರ್ಥ್ಯವಿದ್ದರೂ, 1979-80 ರಷ್ಟರಲ್ಲಿ ಸೃಷ್ಟಿಸಿದ ಒಟ್ಟು ನೀರಾವರಿ ಸಾಮರ್ಥ್ಯ ಕೇವಲ 23 ಲಕ್ಷ ಹೆಕ್ಟೇರುಗಳಿಗೆ ಮಾತ್ರ, ಅಂದರೆ ಒಟ್ಟು ಸಾಮರ್ಥ್ಯದ ಶೇ 42ರಷ್ಟು ಮಾತ್ರ. ಆದರೆ, ವಾಸ್ತವವಾಗಿ ರಾಜ್ಯದಲ್ಲಿ ಕೇವಲ ಶೇ 13.2ರಷ್ಟು ವ್ಯವಸಾಯ ಭೂಮಿ ನೀರಾವರಿಗೊಳಗಾಗಿದೆ. ದೇಶದ ಸರಾಸರಿ 24.6ರಷ್ಟು ವ್ಯವಸಾಯ ಭೂಮಿ ನೀರಾವರಿಗೊಳಗಾಗಿದೆ. ರಾಜ್ಯದ ಸಾಧನೆ ದೇಶದ ಸರಾಸರಿಗಿಂತಲೂ ಹಿಂದಿಳಿರುವುದು ಶೋಚನೀಯ (ಆಧಾರ: ಕರ್ನಾಟಕ ಸರಕಾರದ ಯೋಜನಾ ಖಾತೆಯ ಸಮೀಕ್ಷೆ 1979–80, ಮನೋರಮಾ ವಾರ್ಷಿಕ ಸಂಚಿಕೆ 1982)

ಮಳೆ ಬೆಳೆ

ರಾಜ್ಯದ ಕರಾವಳಿ ಪ್ರದೇಶಗಳಾದ ದ. ಕನ್ನಡ. ಉ. ಕನ್ನಡ ಮತ್ತು ಪರ್ವತ ಪ್ರದೇಶಗಳಾದ ಕೊಡಗು, ಹಾಸನ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳ ಬಹುಭಾಗಗಳಲ್ಲಿ ವರ್ಷಕ್ಕೆ 2500ರಿಂದ 9000 ಮಿಲಿಮೀಟರುಗಳಷ್ಟು ಅತ್ಯಧಿಕಮಳೆ ಬೀಳುವುದು. ಈ ಪ್ರದೇಶಗಳಲ್ಲಿ ಅಪಾರ ಅರಣ್ಯ ಸಂಪತ್ತಿದೆ. ಕರಾವಳಿ ಮತ್ತು ಕಣಿವೆಗಳಲ್ಲಿ ಭತ್ತ ಹಾಗೂ ಬೆಟ್ಟಗುಡ್ಡಗಳ ಇಳಿಜಾರುಗಳಲ್ಲಿ ಕಾಫಿ, ಅಡಿಕೆ, ಮುಂತಾದ ತೋಟಗಾರಿಕೆಯ ಬೆಳೆಗಳನ್ನು ಮಳೆಯ ಆಧಾರದಲ್ಲಿಯೇ ಪಡೆಯಬಹುದಾಗಿದೆ. ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳು ಕೆಲವೇ ಮೈಲುಗಳಲ್ಲಿ ಸಮುದ್ರ ಸೇರುವುದರಿಂದ ವ್ಯವಸಾಯಕ್ಕೆ ಇವುಗಳಿಂದ ನೀರಾವರಿ ಸೌಲಭ್ಯ ಹೆಚ್ಚಾಗಿ ಪಡೆಯಲು ಸಾಧ್ಯವಿಲ್ಲ. ಆದರೂ, ಪಶ್ಚಿಮ ಘಟ್ಟಗಳ ಕಣಿವೆಗಳಲ್ಲಿ ಜಲಾಶಯಗಳನ್ನು ನಿರ್ಮಿಸುವ ಮತ್ತು ಪಶ್ಚಿಮಾಭಿಮುಖವಾಗಿ ಹರಿಯುವ ನದೀ ನೀರನ್ನು ಪೂರ್ವಕ್ಕೆ ಹರಿಯಿಸಿದರೆ, ಈ ಪ್ರದೇಶಗಳಿಗೂ ನೀರಾವರಿ ಸೌಕರ್ಯ ಒದಗಿಸಬಹುದು, ನೆರೆ ಹಾವಳಿಗಳನ್ನು ನಿಯಂತ್ರಿಸಬಹುದು.

ರಾಜ್ಯದ ದಕ್ಷಿಣದ ಬಯಲುಸೀಮೆ ಪ್ರದೇಶಗಳಾದ ಮೈಸೂರು, ಪೂರ್ವ ಹಾಸನ, ಮಂಡ್ಯ, ಕೋಲಾರ, ಬೆಂಗಳೂರು ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ವರ್ಷಕ್ಕೆ 600ರಿಂದ 1000 ಮಿಲಿಮೀಟರುಗಳಷ್ಟು ಸಾಧಾರಣ ಮಳೆ ಬೀಳುವುದು. ಈ ಪ್ರದೇಶಗಳಲ್ಲಿ ಮಳೆ ನೀರು ಹಾಗೂ ನೀರಾವರಿ ಸೌಕರ್ಯಗಳಿಂದ ಹಲವಾರು ಬೆಳೆಗಳನ್ನು ಪಡೆಯಬಹುದು. ಪೂರ್ವಾಭಿಮುಖವಾಗಿ ಹರಿಯುವ ಕಾವೇರಿ, ಹೇಮಾವತಿ, ಲಕ್ಷ್ಮಣತೀರ್ಥ, ಕಬಿನಿ ಮುಂತಾದ ನದಿಗಳು ನೀರಾವರಿಗೆ ತುಂಬಾ ಅನುಕೂಲವಾಗಿವೆ.

ರಾಜ್ಯದ ಉತ್ತರದ ಬಯಲುಸೀಮೆ ಪ್ರದೇಶಗಳಾದ ಬಳ್ಳಾರಿ, ರಾಯಚೂರು, ಗುಲ್ಬರ್ಗ, ಬಿಜಾಪುರ. ಬೆಳಗಾಂ, ಧಾರವಾಡ ಜಿಲ್ಲೆಗಳ ಬಹುಭಾಗ ಶುಷ್ಕ ಪ್ರದೇಶಗಳು. ಈ ಪ್ರದೇಶಗಳಲ್ಲಿ ವರ್ಷಕ್ಕೆ 500ರಿಂದ 600 ಮಿಲಿ ಮೀಟರ್‌ಗಳಷ್ಟು ಮಳೆಯಾಗುವುದು. ಫಲವತ್ತಾದ ಕಪ್ಪು ಮಣ್ಣಿನಿಂದ ರಾಗಿ ಜೋಳ, ಹತ್ತಿ ಬೆಳೆಗಳನ್ನು ಹುಲುಸಾಗಿ ಬೆಳೆಯಬಹುದು. ತುಂಗಭದ್ರಾ, ಮಲಪ್ರಭ, ಘಟಪ್ರಭಾ, ಕೃಷ್ಣಾ ಮೇಲ್ದಂಡೆ ಬೃಹತ್ ಯೋಜನೆಗಳು ಕಾರ್ಯಗತವಾದರೆ ಈ ಪ್ರದೇಶಗಳಿಗೆ ನೀರಾವರಿ ಸೌಕರ್ಯದೊರಕುವುದು. ಮಳೆ ನೀರಿನಿಂದ ಖರೀಫ್ ಬೆಳೆಯನ್ನೂ, ನೀರಾವರಿ ಸೌಕರ್ಯದಿಂದ ರಬಿ ಬೆಳೆಯನ್ನು ಬೆಳೆಯಬಹುದು.

ಹೆಚ್ಚಿನ ನೀರಾವರಿ ಸೌಕರ್ಯದಿಂದ ಕೃಷಿ ಉತ್ಪನ್ನಗಳನ್ನು ಇನ್ನಷ್ಟು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸಬಹುದು; ಗ್ರಾಮೀಣ ಆರ್ಥಿಕ ಅಭಿವೃದ್ಧಿ ಸಾಧಿಸಬಹುದು. ಕೃಷಿ ಕಾರ್ಮಿಕರು ಹಾಗೂ ಬಡ ರೈತರು ನೀರಿಲ್ಲದೆ ಉದ್ಯೋಗವಿಲ್ಲದೆ ನಗರ ಪ್ರದೇಶಗಳಿಗೆ ವಲಸೆ ಹೋಗುವುದನ್ನು ತಪ್ಪಿಸಬಹುದು. ರಾಜ್ಯದಲ್ಲಿ ಆಗಾಗ ಮರುಕಳಿಸುತ್ತಿರುವ ಮತ್ತು ಈ ವರ್ಷ ವ್ಯಾಪಕ ಹಾಗೂ ಭೀಕರವಾಗಿರುವ ಬರಗಾಲ ಪರಿಸ್ಥಿತಿಗೆ ಮೂಲಭೂತವಾಗಿ ದೀರ್ಘ ಕಾಲದ ಕಾಂಗ್ರೆಸ್ ಆಡಳಿತದ ಪಂಚವಾರ್ಷಿಕ ಯೋಜನೆಗಳ ವೈಫಲ್ಯಗಳೇ ಕಾರಣ.

ಇತ್ತೀಚೆಗೆ ರಾಜ್ಯದ ಕೆಲವು ಪ್ರಮುಖ ಪತ್ರಿಕೆಗಳು ಬರಗಾಲ ಪರಿಸ್ಥಿತಿಯ ಕುರಿತು ಹಾಗೂ ಜನರ ಸಮಸ್ಯೆಗಳ ಮತ್ತು ಪರಿಹಾರ ಕಾರ್ಯಗಳ ಕುರಿತು ವಿಶೇಷ ಸಮೀಕ್ಷೆ ನಡೆಸಿವೆ. (ಉದಾ: ಪ್ರಜಾವಾಣಿ, ಇಂಡಿಯನ್ ಎಕ್ಸ್‌ಪ್ರೆಸ್: ಏಪ್ರಿಲ್ ಮತ್ತು ಮೇ, 1983) ಈ ಸಮೀಕ್ಷೆಗಳಿಂದ ಕೆಲವೊಂದು ಮುಖ್ಯಾಂಶಗಳನ್ನು ಗಮನಿಸಬಹುದು.

ಭೀಕರ ಬರಗಾಲ

ಮೇಲ್ಕಾಣಿಸಿದ ಭೌಗೋಲಿಕ ವಿಭಾಗಗಳಲ್ಲಿ ಈ ವರ್ಷ ರಾಜ್ಯದ ಕರಾವಳಿ ಮತ್ತು ಪರ್ವತ ಪ್ರದೇಶಗಳ ಕೆಲವೆಡೆಗಳಲ್ಲಿ ಅಂಕಿತವಾಗಿಯೂ ರಾಜ್ಯದ ದಕ್ಷಿಣ ಮತ್ತು ಉತ್ತರ ಪ್ರದೇಶಗಳ ಹೆಚ್ಚಿನ ಕಡೆಗಳಲ್ಲಿ ವ್ಯಾಪಕವಾಗಿ ಮತ್ತು ಭೀಕರವಾಗಿ ಬರಗಾಲ ಪರಿಸ್ಥಿತಿ ಉಂಟಾಗಿದೆ. ಆಹಾರ ಹಾಗೂ ಆಹಾರೇತರ ಬೆಳೆಗಳು ಭಾರೀ ಪ್ರಮಾಣದಲ್ಲಿ ನಾಶವಾಗಿವೆ. ಕುಡಿಯುವ ನೀರಿನ ಅಭಾವ, ವ್ಯವಸಾಯಕ್ಕೆ ನೀರಿನ ಅಭಾವ, ದನಕರುಗಳಿಗೆ ಮೇವು–ನೀರಿನ ಅಭಾವ ಗಂಭೀರವಾಗಿದೆ. ಬರಗಾಲ ಪೀಡಿತ ಹೆಚ್ಚಿನ ಪ್ರದೇಶಗಳ ಬಡರೈತರು ಕೃಷಿ ಕಾರ್ಮಿಕರು ನೀರಿಗಾಗಿ, ಉದ್ಯೋಗಕ್ಕಾಗಿ, ಉಳಿವಿಗಾಗಿ ನಗರ ಪ್ರದೇಶಗಳಿಗೂ ನೆರೆ ರಾಜ್ಯಗಳಿಗೂ ವಲಸೆ ಹೋಗುತ್ತಿದ್ದಾರೆ.

ಭೂ ಕಂದಾಯ ವಿನಾಯ್ತಿ ಪರಿಹಾರವಲ್ಲ

ರಾಜ್ಯಸರಕಾರ ಕೆಲವು ಪ್ರದೇಶಗಳನ್ನು ಬರಗಾಲ, ಕ್ಷಾಮಪೀಡಿತ ಎಂದು ಘೋಷಿಸಿ ಭೂಕಂದಾಯ ವಸೂಲಿಯಲ್ಲಿ ಸಂಪೂರ್ಣ ಅಥವಾ ಆಂಶಿಕವಾಗಿ ವಿನಾಯತಿ ಮಾಡಿರುವುದರಿಂದ ಹೆಚ್ಚಿನ ಪರಿಹಾರ ಪ್ರಯೋಜನ ಸಿಗಲಾರದು. ಈ ಕ್ರಮಕ್ಕೆ ಸ್ಥಳೀಯ ಪಂಚಾಯತ ಆಡಳಿತಗಳು ಬೆಂಬಲ ಕೊಡಲಾರವು. ಕಾರಣ, ಭೂ ಕಂದಾಯ ವಸೂಲಿಯ 3/4ರಷ್ಟನ್ನು ಪಂಚಾಯತುಗಳಿಗೆ ರಾಜ್ಯ ಸರಕಾರದ ಸಹಾಯ ನಿಧಿಯ ರೂಪದಲ್ಲಿಟ್ಟುಕೊಳ್ಳಲು ಅವಕಾಶವಿದೆ. ಅಲ್ಲದೆ, ಭೂ ಕಂದಾಯ ವಿನಾಯತಿಯಿಂದ ಒಂದು ಗ್ರಾಮಕ್ಕೆ ರೂ 500 ರಿಂದ ರೂ 2000 ದ ವರೆಗೆ ಉಳಿತಾಯವಾಗಬಹುದು. ಇದು ಅತ್ಯಲ್ಪ, ಇದರಿಂದ ಸಂತ್ರಪ್ತ ಗ್ರಾಮೀಣ ಜನರಿಗೆ ಪರಿಹಾರ ಸಿಕ್ಕಿದಂತಾಗುವುದಿಲ್ಲ. ಮೇಲಾಗಿ, ಸರಕಾರ ಅಭಿವೃದ್ಧಿ ತೆರಿಗೆಯನ್ನು ವಸೂಲಿ ಮಾಡುತ್ತಿದೆ, ಇದರಲ್ಲಿ ರಿಯಾಯತಿ ಸಿಗುವುದಿಲ್ಲ.

ಅಧಿಕಾರಿಗಳ ಅಲಕ್ಷ್ಯ

ಕರ್ನಾಟಕದಲ್ಲಿ ಹಲವಾರು ವರ್ಷಗಳಿಂದ ಗ್ರಾಮ ಪಂಚಾಯತುಗಳು ಚುನಾಯಿತ ಪ್ರತಿನಿಧಿಗಳಿಂದ ಪ್ರಜಾಸತ್ತಾತ್ಮಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಪರಿಣಾಮವಾಗಿ, ಕುಡಿಯುವ ನೀರು ಒದಗಿಸಲು, ಕೆರೆ ಬಾವಿಗಳನ್ನು ದುರಸ್ತಿಗೊಳಿಸಲು ಮತ್ತು ಹೊಸದಾಗಿ ತೋಡಲು, ಸಾರ್ವಜನಿಕ ಉಪಯುಕ್ತ ಯೋಜನೆಗಳನ್ನು ಕಾರ್ಯಗತಗೊಳಿಸಲು, ಜೀವನಾವಶ್ಯಕ ವಸ್ತುಗಳನ್ನು ವಿತರಣೆ ಮಾಡಲು, ದನಕರುಗಳಿಗೆ ಮೇವು, ವ್ಯವಸಾಯಕ್ಕೆ ನೀರು, ಬೀಜ, ಗೊಬ್ಬರ ಒದಗಿಸಲು, ಬರಗಾಲ ಪರಿಹಾರ ಕಾರ್ಯಗಳನ್ನು ಸಮರ್ಪಕವಾಗಿ ನೆರವೇರಿಸಲು ದುಸ್ಥಿತಿಗೊಳಗಾದ ಗ್ರಾಮೀಣ ಜನರ ಪಾತ್ರ ಗೌಣ. ಬದಲು, ಅಧಿಕಾರಿಶಾಹಿಗಳ ಹಾಗೂ ರಾಜಕೀಯ ಪುಢಾರಿಗಳ ಸ್ವಾರ್ಥಸಾಧನೆಯ ಹಸ್ತಕ್ಷೇಪವೇ ಹೆಚ್ಚು. ಅವರೊಳಗಿನ ಪೈಪೋಟಿ, ಅಲಕ್ಷ್ಯ, ದುರಾಡಳಿತದಿಂದ ಜನರಿಗೆ ನಿರೀಕ್ಷಿಸಿದ ಪರಿಹಾರ ಸಿಗುತ್ತಿಲ್ಲ. ಜನರ ಮತ್ತು ಅಧಿಕಾರಿಗಳ ನಡುವೆ ಸಂಪರ್ಕ ಅತೃಪ್ತಿಕರವಾಗಿದೆ. ಪರಿಹಾರಕ್ಕಾಗಿ ಯಾರನ್ನು ಮೊರೆ ಹೋಗಬೇಕೆಂದು ಜನರು ತಿಳಿಯದಾಗಿದ್ದಾರೆ. ಅಧಿಕಾರಿಗಳು ತಮ್ಮ ನಿತ್ಯದ ಕಾರ್ಯಚಾರಗಳಲ್ಲಿಯೇ ಮುಳುಗಿರುವುದರಿಂದ ಪರಿಹಾರ

(7ನೇ ಪುಟ ನೋಡಿ)

ರಾಜ್ಯದ ಮುಖ್ಯ ಆಹಾರ ಹಾಗೂ ಆಹಾರೇತರ ಬೆಳೆಗಳು (1978-79)

ಬೆಳೆಗಳು	ವಿಸ್ತಾರ (ಲಕ್ಷ ಹೆಕ್ಟೇರುಗಳು)	ಉತ್ಪಾದನೆ ಲಕ್ಷ ಟನ್ನುಗಳು	ದೇಶದ ಉತ್ಪಾದನೆಯ ಶೇಕಡಾಂಶ
ಆಹಾರ ಬೆಳೆಗಳು			
ಅಕ್ಕಿ	11.46	23.03	5%
ಜೋಳ	19.80	19.32	16%
ಬಾಜ್ರ	6.63	3.14	5%
ಮೆಕ್ಕೆಜೋಳ	1.84	5.42	7%
ರಾಗಿ	10.29	14.65	47%
ಆಹಾರೇತರ ಬೆಳೆಗಳು			
ನೆಲಗಡಲೆ	9.94	7.74	10%
ಹತ್ತಿ	10.47	8.23	10%
ಕಬ್ಬು	1.58	118.28	5%
ಕಾಫಿ	—	—	59%
ಏಲಕ್ಕಿ	—	—	49%
ಅಡಿಕೆ	—	—	42%
ತೆಂಗು	—	—	13%

(ಮನೋರಮ ; 1982)

ಕ್ರಾಂತಿಕಾರಿ ಚಳುವಳಿಯ ಮುನ್ನಡೆಯಲ್ಲಿ ಸಾರ್ವತ್ರಿಕ ಮತದಾನದ ಉಪಯೋಗ

ಫ್ರೆಡರಿಕ್ ಎಂಗೆಲ್ಸ್

ಅನು: ನಾಗರಾಜ್ ಜಿ. ಎನ್.

ಸಾರ್ವತ್ರಿಕ ಮತದಾನ ಮತ್ತು ಪಾರ್ಲಿಮೆಂಟರಿ ಪ್ರಜಾಸತ್ತೆಯನ್ನು ನಮ್ಮ ಚಳುವಳಿಯ ಬೆಳವಣಿಗೆಗೆ ಉಪಯೋಗಿಸಿಕೊಳ್ಳುವ ರೀತಿಯ ಬಗ್ಗೆ ಕಾರ್ಲ್‌ಮಾರ್ಕ್ಸ್‌ರ 'ಫ್ರಾನ್ಸ್‌ನಲ್ಲಿ ವರ್ಗ ಹೋರಾಟಗಳು' ಎಂಬ ಅಧ್ಯಯನಕ್ಕೆ ಬರೆದ ಪ್ರವೇಶಿಕೆಯಲ್ಲಿ ಎಂಗೆಲ್ಸ್‌ರವರ ವಿಶ್ಲೇಷಣೆಯ ಆಯ್ದ ಭಾಗಗಳ ಅನುವಾದವನ್ನು ಇಲ್ಲಿ ಮಂಡಿಸಲಾಗಿದೆ.

ಸಾರ್ವತ್ರಿಕ ಮತದಾನವನ್ನು ಉಪಯೋಗಿಸುವ ರೀತಿಯನ್ನು ಮಹತ್ವವನ್ನು ತೋರಿಸಿಕೊಡುವುದರಮೂಲಕ ಜರ್ಮನ್ ಕಾರ್ಮಿಕರು ಜಗತ್ತಿನ ಕಾರ್ಮಿಕ ಸಮುದಾಯಕ್ಕೆ ಒಂದು ಹೊಸ ಹರಿತವಾದ ಆಯುಧವನ್ನು ಒದಗಿಸಿಕೊಟ್ಟರು. ಒಂದು ಮಹತ್ವದ ಸೇವೆಯನ್ನು ಸಲ್ಲಿಸಿದರು.

1866ರಲ್ಲಿ ತಮ್ಮ ದೇಶದಲ್ಲಿ ಜಾರಿಗೆ ಬಂದ ಸಾರ್ವತ್ರಿಕ ಮತದಾನವನ್ನು ಜಾಣತನದಿಂದ ಉಪಯೋಗಿಸಿ ತಮ್ಮ ಪಕ್ಷದ ವಿಸ್ಮಯಕರ ಬೆಳವಣಿಗೆಯನ್ನು ನಿಸಂದಿಗ್ಧವಾಗಿ ಇಡೀ ವಿಶ್ವಕ್ಕೆ ತೋರಿಸಿದರು. ಚುನಾವಣೆಯಿಂದ ಚುನಾವಣೆಗೆ ಪಕ್ಷ ಬೆಳೆಯುತ್ತಿದ್ದ ರೀತಿಯನ್ನು ನೋಡಿ :

1871ರಲ್ಲಿ	102,000
1874ರಲ್ಲಿ	352,000
1877ರಲ್ಲಿ	4930,00

ಇವು ಸೋಷಿಯಲ್ ಡೆಮೊಕ್ರಾಟ್ ಪಕ್ಷದ ಮತಗಳು. ನಂತರ ಸರ್ಕಾರ ಸಮಾಜವಾದಿ ವಿರೋಧಿ ಕಾನೂನನ್ನು ಜಾರಿಗೆ ತಂದಿತು. ಆಡಳಿತವರ್ಗ ಈ ಬೆಳವಣಿಗೆಯನ್ನು ಗುರುತಿಸಿದ ರೀತಿ ಇದು. ಪರಿಣಾಮ ಪಕ್ಷವನ್ನು ತಾತ್ಕಾಲಿಕವಾಗಿ ಆ ಮೂಲಕ ಮುರಿಯಲಾಯಿತು. 1881ರಲ್ಲಿ ಮತಗಳ ಸಂಖ್ಯೆ 312,000ಕ್ಕೆ ಇಳಿಯಿತು ಆದರೆ ತಕ್ಷಣ ಈ ಹಿನ್ನೆಡೆಯನ್ನು ನಿವಾರಿಸಿಕೊಳ್ಳಲಾಯಿತು. ಪ್ರತಿಷೇದ ಕಾನೂನುಗಳ ಒತ್ತಡದ ನಡುವೆ ಪತ್ರಿಕೆಗಳಿಲ್ಲದೆ, ಶಾಸನ ಸಮ್ಮತ ಪಕ್ಷವಿಲ್ಲದೆ ಸಭೆಗಳನ್ನು ನಡೆಸುವ ಬೇರೆ ಪಕ್ಷಗಳೊಡನೆ ಒಪ್ಪಂದ ಮಾಡಿಕೊಳ್ಳುವ ಅವಕಾಶಗಳಿಲ್ಲದೆಯೂ ತೀವ್ರ ಬೆಳವಣಿಗೆ ಆರಂಭವಾಯಿತು.

1884ರಲ್ಲಿ	550,000
1887ರಲ್ಲಿ	763,000
1890ರಲ್ಲಿ	1.427000

ಮತಗಳು. ಇದರ ಪರಿಣಾಮವಾಗಿ ರಾಜ್ಯಶಕ್ತಿಯ ಕೈ ನಡೆಯದಾಯಿತು. ಸಮಾಜವಾದಿ ವಿರೋಧಿ ಕಾನೂನು ಮಾಯವಾದವು. ಸಮಾಜವಾದಿ ಮತಗಳು 1,787,000ಕ್ಕೆ ಅಂದರೆ ಒಟ್ಟು ಮತಗಳ ಕಾಲುಭಾಗಕ್ಕೇರಿದವು. ಸರ್ಕಾರ ಮತ್ತು ಆಳುವ ವರ್ಗಗಳ ಎಲ್ಲಾ ದಮನಕಾರಿ ಸಾಧನ ಸಲಕರಣೆಗಳು ಬರಿದಾದುವು. ತಮ್ಮ ಷಂಡತನದ ಈ ಸ್ಪಷ್ಟ ರುಜುವಾತನ್ನು ಆಳುವವರ್ಗ, ಆಳಿನಿಂದ ಹಿಡಿದು ಅರಸನ (ಇಂಪೀರಿಯಲ್ ಛಾನ್ಸೆಲರ್) ವರೆಗೂ ಒಪ್ಪಲೇಬೇಕಾಯಿತು.ಅದೂ ನಿಕೃಷ್ಟ ಕಾರ್ಮಿಕರಿಂದ, ಮಿಲಿಯಾಂತರ ಸಂಖ್ಯೆಗಳಲ್ಲಿ ರಾಜ್ಯಶಕ್ತಿ ತನ್ನ ಅಂತ್ಯವನ್ನು ಕಾಣುತ್ತಿದ್ದರೆ ಶ್ರಮಿಕಶಕ್ತಿ ಆಗ ತಾನೇ ಉದಿಸಲಾರಂಭಿಸಿತ್ತು.

ಸಾರ್ವತ್ರಿಕ ಮತದಾನವನ್ನು, ಪ್ರಜಾಪ್ರಭುತ್ವವನ್ನು ಪಡೆಯುವುದು ಸಮರಶೀಲ ಶ್ರಮಿಕವರ್ಗದ ಮೊದಲ ಮತ್ತು ಅತ್ಯಂತ ಮುಖ್ಯ ಕರ್ತವ್ಯಗಳಲ್ಲಿ ಒಂದು. ಕಮ್ಯುನಿಸ್ಟ್ ಪ್ರಣಾಳಿಕೆ ಇದನ್ನಾಗಲೆ ಘೋಷಿಸಿತ್ತು. ಲಾಸಲ್ಲೆ ಮತ್ತೊಮ್ಮೆ ಅದನ್ನು ಹೇಳಿದ್ದರು. ಈಗ ತನ್ನ ಯೋಜನೆಗಳಲ್ಲಿ ಜನರಿಗೆ ಆಸಕ್ತಿ ಹುಟ್ಟಿಸುವ ಬೇರಾವ ಮಾರ್ಗವಿಲ್ಲದೆ, ಬಿಸ್‌ಮಾರ್ಕ್ ಮತದಾನವನ್ನು ಜಾರಿಗೆ ತರಬೇಕಾದ ಒತ್ತಾಯದ ಪರಿಸ್ಥಿತಿ ಬಂದಾಗ ನಮ್ಮ ಕಾರ್ಮಿಕರು ಅದನ್ನು ತೀವ್ರವಾಗಿ ಪರಿಗಣಿಸಿ ಆಗಸ್ಟ್ ಬೆಬಲ್‌ರನ್ನು ಮೊದಲ ರೀಷ್‌ಸ್ಟಾಗ್ (ಜರ್ಮನ್ ಪಾರ್ಲಿಮೆಂಟ್)ಗೆ ಆರಿಸಿದರು. ಅಂದಿನಿಂದ ಈ ಮತದಾನವನ್ನು ಅವರು ಉಪಯೋಗಿಸಿದ ರೀತಿ ಅವರಿಗೆ ಸಾವಿರ ಪಟ್ಟು ಪ್ರಯೋಜನಕಾರಿಯಾಗಿದೆಯಲ್ಲದೆ ಎಲ್ಲಾ ದೇಶಗಳ ಕೆಲಸಗಾರರಿಗೆ ಮಾರ್ಗದರ್ಶಿಯಾಯಿತು. ಫ್ರೆಂಚ್ ಮಾರ್ಕ್ಸ್‌ವಾದಿ ಕಾರ್ಯಕ್ರಮದಲ್ಲಿ ಹೇಳಿರುವಂತೆ ಅವರು ಬಂಡವಾಳಶಾಹಿಯ ಮೋಸದ ಸಾಧನವೊಂದನ್ನು ಕಾರ್ಮಿಕರ ಬಿಡುಗಡೆಯ ಸಾಧನವಾಗಿ ಪರಿವರ್ತಿಸಿದರು. ಸಾರ್ವತ್ರಿಕ ಮತದಾನದಿಂದ ನಮ್ಮ ಸಂಖ್ಯೆಯನ್ನು ಲೆಕ್ಕಿಸುವುದಲ್ಲದೆ ಬೇರಾವ ಪ್ರಯೋಜನ ಇಲ್ಲದಿದ್ದರೂ ಕೂಡ ಸಾಕಾಗುತ್ತಿತ್ತು. ಅವಿರತವಾಗಿ ಆಶ್ಚರ್ಯಕರವಾಗಿ ಏರುತ್ತಿರುವ ನಮ್ಮ ಮತಗಳ ಸಂಖ್ಯೆಯನ್ನು ನೋಡಿ ಕಾರ್ಮಿಕರಿಗೆ ತಮ್ಮ ಜಯದ ಬಗ್ಗೆ ವಿಶ್ವಾಸ ಗಟ್ಟಿಯಾದರೆ ಅವರ ವಿರೋಧಿಗಳಿಗೆ ಅದೇ ಪ್ರಮಾಣದಲ್ಲಿ ತಲ್ಲಣ ಉಂಟುಮಾಡುತ್ತಿದೆ. ಹೀಗಾಗಿ ನಮ್ಮ ಅತ್ಯುತ್ತಮ ಪ್ರಚಾರ ಮಾಧ್ಯಮವಾಗಿ ಪರಿಣಮಿಸಿದೆ.ನಮ್ಮ ಬಲವನ್ನು ಮತ್ತು ನಮ್ಮ ವಿರೋಧಿ ಪಕ್ಷಗಳ ಸಂಖ್ಯೆಯನ್ನು ನಿಖರವಾಗಿ ಅಳೆದು ನಮ್ಮ ಬಲದ ಪ್ರಮಾಣದ ಬಗ್ಗೆ ಒಂದು ಅಂದಾಜನ್ನೊದಗಿಸುತ್ತದೆ. ಆದರೆ ಇಷ್ಟೇ ಅಲ್ಲದೆ ಮತ್ತೆ ಅನೇಕ ಪ್ರಯೋಜನಗಳಿವೆ. ಚುನಾವಣಾ ಕಾಳಗದಲ್ಲಿ ನಮ್ಮಿಂದ ಇನ್ನೂ ಪ್ರತ್ಯೇಕವಾಗಿರುವ ಜನವಿಭಾಗವನ್ನು ಸಂಪರ್ಕಿಸಲು ಎಣೆಯಿಲ್ಲದ ಸಾಧನವನ್ನೊದಗಿಸುತ್ತದೆ.ನಮ್ಮ ಘೋಷಣೆ ಮತ್ತು ಕ್ರಮಗಳಿಗೆ ವಿರುದ್ಧವಾಗಿ ವಿರೋಧಿಗಳು ತಮ್ಮನ್ನು ಸಮರ್ಥಿಸಿಕೊಳ್ಳಬೇಕಾದ ಅವಶ್ಯಕತೆಯನ್ನುಂಟುಮಾಡುತ್ತದೆ. ಶಾಸನ ಸಭೆಗಳಲ್ಲಿ ಪ್ರತಿನಿಧಿಗಳಿಗೆ ನಮ್ಮ ವಿರೋಧಿಗಳೊಂದಿಗೆ ವಾದಿಸಲು ವೇದಿಕೆಯನ್ನು ಒದಗಿಸುತ್ತದೆ. ಪತ್ರಿಕೆ ಮತ್ತು ಸಭೆಗಳಿಗಿಂತ ವಿಶಿಷ್ಟವಾದ ಸ್ವಾತಂತ್ರ್ಯ ಮತ್ತು ಹಕ್ಕಿನಿಂದ ಜನಸಮೂಹದೊಡನೆ ಮಾತನಾಡಲು ಕೂಡ ವೇದಿಕೆಯನ್ನೊದಗಿಸುತ್ತಿದೆ. ಚುನಾವಣಾ ಪ್ರಚಾರದಲ್ಲಿ ಮತ್ತು ಲೋಕಸಭೆಯಲ್ಲಿ ಸಮಾಜವಾದಿ ಭಾಷಣಗಳು ಮೊಳಗುತ್ತಿದ್ದಾಗ ಸಮಾಜವಾದಿ ವಿರೋಧಿ ಕಾನೂನಿನಿಂದ ಬಂಡವಾಳಶಾಹಿಗೆ ಆಗುವ ಲಾಭವಾದರೂ ಏನು ?

ಸಾರ್ವತ್ರಿಕ ಮತದಾನದ ಈ ಯಶಸ್ವೀ ಪ್ರಯೋಗದಿಂದ ಶ್ರಮಿಕರ ಹೋರಾಟದಲ್ಲಿ ಒಂದು ಹೊಸವಿಧಾನ ಬಳಕೆಗೆ ಬಂತು ಮತ್ತು ತೀವ್ರವಾಗಿ ಅಭಿವೃದ್ಧಿಯಾಯಿತು. ಬಂಡವಾಳಶಾಹಿಯ ಪ್ರಭುತ್ವ ಸಂಘಟಿತರಾಗುವ ಈ ರಾಜ್ಯಶಕ್ತಿಯ ಆಧಾರ ಸಂಸ್ಥೆಗಳು ಶ್ರಮಿಕರಿಗೆ ಈ ಸಂಸ್ಥೆಗಳ ವಿರುದ್ಧ ಹೋರಾಡಲು ಹೆಚ್ಚಿನ ಅವಕಾಶಗಳನ್ನೊದಗಿಸುತ್ತದೆ.ಕಾರ್ಮಿಕರು ಲೋಕಸಭೆಗಳಿಗೆ ಪೌರಾಡಳಿತ ಸಂಸ್ಥೆಗಳಿಗೆ ಮತ್ತು ವಾಣಿಜ್ಯ ನ್ಯಾಯಾಲಯಗಳಿಗೆ ಚುನಾವಣೆಯಲ್ಲಿಸ್ಪರ್ಧಿಸಿದರು.ಶ್ರಮಿಕ ವರ್ಗ ಸಾಕಷ್ಟು ಪ್ರಮಾಣದಲ್ಲಿ ದನಿಯೆತ್ತಬಹುದಾದ ಎಲ್ಲಾ ಹುದ್ದೆಗಳಿಗೆ ಬಂಡವಾಳಷಾಹಿಯೊಂದಿಗೆ ಮುಖಾಮುಖಿಯಾಗಿ ಸ್ಪರ್ಧಿಸಿದರು. ಇದರಿಂದ ಏನಾಯಿತೆಂದರೆ. ಬಂಡವಾಳಷಾಹಿ ಮತ್ತು ಸರ್ಕಾರ ಶಾಸನ ಸಮ್ಮತವಲ್ಲದ ಚಟುವಟಿಕೆಗಳಿಗಿಂತಲೂ ಶಾಸನಬದ್ಧ ಕ್ರಮಗಳಿಗೆ. ದಂಗೆಯ ಫಲಿತಾಂಶಕ್ಕಿಂತಲೂ ಚುನಾವಣೆಯ ಫಲಿತಾಂಶಗಳಿಗೆ ಹೆಚ್ಚು ಹೆದರುವಂತಾಯಿತು.

ಹೋರಾಟದ ಪರಿಸ್ಥಿತಿ ಬದಲಾಗಿದೆ ಹಳೆಯ ರೀತಿಯ, ಬೀದಿಹೋರಾಟಗಳ ಮೂಲಕ ಮಾಡುವ ದಂಗೆಯ ವಿಧಾನ ಲುಪ್ತವಾಗಿದೆ ಏಕೆಂದರೆ ಆ ದಿನಗಳ ನಂತರ ಅನೇಕ ಬದಲಾವಣೆಗಳಾಗಿದೆ. ಎಲ್ಲವೂ ಸೈನ್ಯಕ್ಕೆ ಅನುಕೂಲವಾಗಿ ದೊಡ್ಡ ಪಟ್ಟಣಗಳು ಮತ್ತಷ್ಟು ದೊಡ್ಡದಾಗಿವೆ. ಸೈನ್ಯ ಅದಕ್ಕಿಂತಲೂ ವೇಗವಾಗಿ ಬೆಳೆದಿದೆ. ರೈಲ್ವೆಗಳ ಮುಖಾಂತರ ಈ ತುಕಡಿಗಳು ಕೇವಲ 24ಗಂಟೆಗಳಲ್ಲಿ ಎರಡರಷ್ಟಾಗಬಹುದು. ಮತ್ತು 48ಗಂಟೆಗಳಲ್ಲಿ ಒಂದು ದೊಡ್ಡ ಸೈನ್ಯವೇ ಆಗಬಹುದು. ಸೈನ್ಯದ ಉಪಕರಣಗಳು ಕೂಡ ಬಹಳ ಪರಿಣಾಮಕಾರಿಯಾಗಿ ಬೆಳೆದಿದೆ. (ಎಂಗೆಲ್ಸರು 1848ರ ಪರಿಸ್ಥಿತಿಗೂ ಮತ್ತು 1895ರ ಪರಿಸ್ಥಿತಿಗೂ ಹೋಲಿಸುತ್ತಾರೆ. 20ನೇ ಶತಮಾನದ ತೀವ್ರ ಸಂಪರ್ಕದ ಮತ್ತು ನ್ಯೂಟ್ರಾನ್ ಬಾಂಬ್‌ಗಳ ಯುಗದಲ್ಲಿ ಈ ಬೆಳವಣಿಗೆ ಎಷ್ಟು ಸಾವಿರ, ಲಕ್ಷ ಪಟ್ಟು ಹೆಚ್ಚಾಗಿದೆ ಎಂಬುದನ್ನು ಊಹಿಸಿಕೊಳ್ಳಬಹುದು.) ಎಂದರೆ ಇನ್ನು ಮುಂದೆ ಬೀದಿ ಕಾಳಗದ ಪಾತ್ರ ಏನೂ ಇರುವುದಿಲ್ಲವೆಂದೆ! ಖಂಡಿತಾ ಅಲ್ಲ. 1898ರ ನಂತರದಲ್ಲಿ ಪರಿಸ್ಥಿತಿ ನಾಗರಿಕ ಹೋರಾಟಗಾರರಿಗೆ ಅನಾನುಕೂಲಕರವಾಗಿ ಮತ್ತು ಸೈನ್ಯಕ್ಕೆ ಅನುಕೂಲವಾಗಿ ಪರಿಣಮಿಸಿದೆ. ಆದ್ದರಿಂದ ಇನ್ನು ಮುಂದೆ ಬೇರೆ ಸಂಗತಿಗಳು ಈ ಪ್ರತಿಕೂಲ ಪರಿಸ್ಥಿತಿಗೆ ಪರಿಹಾರವಾಗಿ ಒದಗಿದರೆ ಮಾತ್ರ ಬೀದಿ ಕಾಳಗ ಜಯಶೀಲವಾಗಬಲ್ಲದು. ಆದ್ದರಿಂದ ಕ್ರಾಂತಿಯ ಆರಂಭದಲ್ಲಿ ಮಾತ್ರ ಹೆಚ್ಚಿನ ಶಕ್ತಿಯೊಡನೆ ಬೀದಿಕಾಳಗದ, ವಿಧಾನವನ್ನು ಬಳಸಬೇಕಾಗುತ್ತದೆ. ಆಗ ರಕ್ಷಣಾತ್ಮಕ ಬೀದಿ ಹೋರಾಟಗಳಿಗಿಂತ ಆಕ್ರಮಣಕಾರಿ ವಿಧಾನದ ಹೋರಾಟಗಳಿಗೆ ಹೆಚ್ಚು ಆದ್ಯತೆ ದೊರಕುತ್ತದೆ,

ಈಗ ಓದುಗನಿಗೆ ಅರ್ಥವಾಗಿದೆಯೆ, ಏಕೆ ಆಳುವ ಶಕ್ತಿಗಳು ನಮ್ಮನ್ನು ಗುಂಡಿನ ಮಧ್ಯೆ ನೂಕಬಯಸುತ್ತಾರೆ ಎನ್ನುವುದು ? ಬೀದಿಕಾಳಗದಲ್ಲಿ ನಮಗಾಗಿ ಕಾದಿರುವ ಸೋಲನ್ನಪ್ಪಲು ನಿರಾಕರಿಸುವ ಕಾರಣಕ್ಕಾಗಿ ನಮ್ಮನ್ನು ಏಕೆ ಹೇಡಿಗಳೆಂದು ಕರೆಯುತ್ತಾರೆ ಎನ್ನುವುದು. ಆದರೆ ಈ ಸವಾಲುಗಳು ವ್ಯರ್ಥ. ನಾವು ಮೂರ್ಖರಲ್ಲ. ರಾಷ್ಟ್ರಗಳ ನಡುವಿನ ಯುದ್ಧದ ಪರಿಸ್ಥಿತಿ ಬದಲಾಗಿರುವಷ್ಟೆ ವರ್ಗ ಹೋರಾಟದ ಪರಿಸ್ಥಿತಿಯೂ ಬದಲಾಗಿದೆ. ಅನಿರೀಕ್ಷಿತ ಆಕ್ರಮಣಗಳು, ಪ್ರಜ್ಞಾವಂತ ಕೆಲವೇ ಜನರ ನಾಯಕತ್ವದಲ್ಲಿ ಅಪ್ರಜ್ಞಾವಂತೆ ಬಹುಸಂಖ್ಯಾತರು ನಡೆಸುವ ಕ್ರಾಂತಿಗಳ ಕಾಲ ಹಿಂದೆ ಸರಿಯಿತು. ಸಮಾಜ ರಚನೆಯ ಸಂಪೂರ್ಣ ಬದಲಾವಣೆಯ ಕಾಲದಲ್ಲಿ ಇದೇ ಜನಸಮೂಹವೇ 'ಅದರಲ್ಲಿರಬೇಕು. ತಮ್ಮೆದುರು ಇರುವ ಪ್ರಶ್ನೆ ಏನೆಂದು ಪೂರ್ತಿ ಅರ್ಥಮಾಡಿಕೊಂಡಿರಬೇಕು ನಾವು ಸಾಗುತ್ತಿರುವುದು ಎಲ್ಲಿಗೆ ಎಂಬುದರ ಅರಿವಿರಬೇಕು ಹಿಂದಿನ 50 ವರ್ಷಗಳ ಚರಿತ್ರೆ ನಮಗೆ ಈ ಪಾಠವನ್ನು ಕಲಿಸಿದೆ. ನಮ್ಮ ಜನಸಮೂಹ . ತಮ್ಮ ಕರ್ತವ್ಯವನ್ನು ಅರಿತುಕೊಳ್ಳಬೇಕಾದರೆ ದೀರ್ಘಕಾಲದ, ಅವಿರತ ದುಡಿಮೆ ಅಗತ್ಯವಾಗಿದೆ. ಈಗ ನಾವು ಮಾಡುತ್ತಿರುವುದು ಅದನ್ನೇ. ಈ ಕೆಲಸದಲ್ಲಿ ನಾವು ಗಳಿಸಿರುವ ವಿಜಯ ಶತ್ರುಗಳನ್ನು ಕಂಗೆಡಿಸಿದೆ ನಮ್ಮ ಇತರ ದೇಶಗಳ ಸಂಗಾತಿಗಳು ತಮ್ಮ ಕ್ರಾಂತಿಯ ಹಕ್ಕನ್ನು ಸ್ವಲ್ಪವೂ ತ್ಯಾಗಮಾಡುವುದಿಲ್ಲ. ಕ್ರಾಂತಿಯ ಹಕ್ಕೊಂದೇ ನಿಜವಾದ ಚಾರಿತ್ರಿಕ ಹಕ್ಕಲ್ಲವೇ ? ಬೇರೆ ದೇಶಗಳಲ್ಲಿ ಏನೇ ಆಗಲಿ ಜರ್ಮನಿಯ ಸೋಷಿಯಲ್ ಡೆಮಾಕ್ರಸಿ ಒಂದು ವಿಶಿಷ್ಟ ಸ್ಥಾನವನ್ನಾಕ್ರಮಿಸಿದೆ ಮತ್ತು ಅದರಿಂದಾಗಿ ಮುಂದಿನ ದಿನಗಳಲ್ಲಿ ವಿಶೇಷ ಕರ್ತವ್ಯ ಭಾರವನ್ನು ಹೊತ್ತಿದೆ. ಅದು ಮತಗಟ್ಟೆಗೆ ಕಳುಹಿಸುತ್ತಿರುವ 20 ಲಕ್ಷ ಮತದಾರರು ಮತ್ತು ಅವರ ಹಿಂದೆ ಇರುವ ಮತದಾರರಲ್ಲಿ ಯುವಕರು ಮತ್ತು ಯುವತಿಯರು ಅತಿ ಹೆಚ್ಚಿನ, ಅತಿ ಬಿಕ್ಕಟ್ಟಾದ ವಿಶ್ವದ ಶ್ರಮಿಕ ಸೈನ್ಯದ ತಲ್ಲಣಕಾರಿ ಸೇನಾ ವಿಭಾಗವಾಗಿದೆ. ಈಗಾಗಲೇ ಕಾಲುಭಾಗ ಮತಗಳನ್ನು ಪಡೆದಿದ್ದೇವೆ ವಿವಿಧ ರಾಜ್ಯಗಳಲ್ಲಿ ಮತ್ತು ಲೋಕಸಭೆಗೆ (ರೀಷ್‌ಸ್ಟಾಗ್) ನಡೆಯುವ ಉಪಚುನಾವಣೆಗಳಲ್ಲಿ ನಗರ ಸಭೆಗಳಿಗೆ ಮತ್ತು ವಾಣಿಜ್ಯದ ಕೋರ್ಟುಗಳಿಗೆ ನಡೆಯುವ ಚುನಾವಣೆಯಲ್ಲಿ ಈ ಬಲ ನಿರಂತರವಾಗಿ ಹೆಚ್ಚಾಗುತ್ತಿವೆ. ಒಂದು ನೈಸರ್ಗಿಕ ಪ್ರಕ್ರಿಯೆಯಂತೆ ಶಾಂತವಾಗಿ ಒಂದೇ ಸಮನೇ ಸ್ವಯಂ ಸ್ಫೂರ್ತಿಯಿಂದ ತಡೆಯಿಲ್ಲದೆ ಈ ಬೆಳವಣಿಗೆ ಸಾಗಿದೆ. ಸರ್ಕಾರದ ಎಲ್ಲ ರೀತಿಯ ಮಧ್ಯಪ್ರವೇಶಗಳು ಇದರ ಮುಂದೆ ನಿಶ್ಯಕ್ತವಾಗಿವೆ. ಇದೇ ರೀತಿ ಮುಂದುವರಿದರೆ ಈ ಶತಮಾನದ ಅಂತ್ಯದ ಒಳಗೆ ನಮ್ಮ ಸಮಾಜದ ಮಧ್ಯಮವರ್ಗಗಳು ಪೆಟ್ಟಿ ಬೂರ್ಜ್ವಾ ಮತ್ತು ಸಣ್ಣ ರೈತರನ್ನು ಗೆಲ್ಲುತ್ತೇವೆ. ಈ ನಾಡಿನ ನಿರ್ಧಾರಕ ಶಕ್ತಿಯಾಗಿ ಬೆಳೆಯುತ್ತೇವೆ. ಈ ಶಕ್ತಿಯ ಮುಂದೆ ಎಲ್ಲಾ ಶಕ್ತಿಗಳು ಅವರಿಗೆ ಇಷ್ಟವಿರಲಿ ಬಿಡಲಿ ಮಣಿಯಬೇಕಾಗುತ್ತದೆ. ಈ ಬೆಳವಣಿಗೆ ತಡೆಯಿಲ್ಲದೆ ಮುಂದೆ ಹೋಗುವಂತೆ ತಾನಾಗಿಯೇ ಈ ಸರ್ಕಾರದ ಹಿಡಿತದಿಂದ ಕೈತಪ್ಪಿ ಹೋಗುವವರೆಗೂ ಸಣ್ಣ ಪುಟ್ಟ ಜಗಳಗಳಲ್ಲಿ ಶಕ್ತಿಕುಂಠಿತ ಮಾಡಿಕೊಳ್ಳದಂತೆ ಮುಂದೆ ನಿರ್ಧಾರಕ ದಿನ ಬರುವವರೆಗೂ ಕಾಯ್ದಿಡುವುದು ಈಗ ಜರ್ಮನಿಯಲ್ಲಿ ಸಮಾಜವಾದಿ ಬಲದ ಬೆಳೆವಣಿಗೆಯನ್ನು ತಾತ್ಕಾಲಿಕವಾಗಿ ತಡೆಗಟ್ಟಲು ಮತ್ತು ಸ್ವಲ್ಪ ಕಾಲ ಹಿಂದೆ ತಳ್ಳಲು ಇರುವ ಮಾರ್ಗ ಒಂದೇ. ಮಿಲಿಟರಿಯೊಡನೆ ದೊಡ್ಡ ಪ್ರಮಾಣದ ಹೋರಾಟ, ಪ್ಯಾರಿಸ್‌ನಲ್ಲಿ 1871ರಲ್ಲಿ ಆದಂತಹ ಹೋರಾಟ ಅಂತಹ ಸಂಭವವನ್ನು ಮೀರುವ ಶಕ್ತಿ ಇದೆ. ಏಕೆಂದರೆ ಮಿಲಿಯಾಂತರ ಜನ ಇರುವ ಪಕ್ಷವನ್ನು ಸಂಪೂರ್ಣವಾಗಿ ನಾಶಮಾಡಲು ಯೂರೋಪ, ಅಮೇರಿಕಾಗಳ ಎಲ್ಲ ಬಂದೂಕುಗಳಿಗೂ ಕೂಡ ಅಸಾಧ್ಯ. ಆದರೆ ಚಳವಳಿಯ ಸ್ವಾಭಾವಿಕ ಬೆಳವಣಿಗೆಯನ್ನು ಹಿಂದೂಡಬಹುದು, ಅತಿ ಅವಶ್ಯಕವಾದ ಕ್ಷಣದಲ್ಲಿ ನಮ್ಮ ಆಘಾತಕಾರಿ ಬಲ ದೊರೆಯದೆ ನಿರ್ಧಾರಕ ಹೋರಾಟ ತಡವಾಗಿ ದೀರ್ಘಕಾಲ ಎಳೆಯಬಹುದು ಮತ್ತು

(6ನೇ ಪುಟ ನೋಡಿ)

ಇರಾನ್ ಕ್ರಾಂತಿಕಾರಿಗಳ ಮೇಲಿನ ದೌರ್ಜನ್ಯಕ್ಕೆ ಸಿ.ಐ.ಟಿ.ಯು. ಖಂಡನೆ

ಸಿ.ಐ.ಟಿ.ಯು.ನ ಅಧ್ಯಕ್ಷರಾದ ಕಾ. ಬಿ.ಟಿ. ರಣದಿವ ಮತ್ತು ಸಿ.ಐ.ಟಿ.ಯು.ನ ಪ್ರಧಾನ ಕಾರ್ಯದರ್ಶಿ ಪಾರ್ಲಿಮೆಂಟ್ ಸದಸ್ಯರೂ ಆದ ಕಾ. ಸಮರ್ ಮುಖರ್ಜಿ ಅವರು ಕೆಳಗಿನ ಪತ್ರಿಕಾ ಹೇಳಿಕೆಗಳೂ ಯನ್ನು ನೀಡಿದ್ದಾರೆ.

ಸಾಮ್ರಾಜ್ಯಶಾಹಿಗಳ ಮತ್ತವರ ಕೈಗೊಂಬೆಯಾಗಿದ್ದ ಇರಾನಿನ ಶಹಾನ ವಿರುದ್ಧ ನಡೆದ ಹೋರಾಟದಲ್ಲಿ ಈಗ ಅಧಿಕಾರದಲ್ಲಿರುವವರೊಂದಿಗೆ ಹಗಲಿಗೆ ಹೆಗಲು ನೀಡಿ ಹೋರಾಟ ನಡೆಸಿದ ಇರಾನಿನ ಕ್ರಾಂತಿಕಾರಿಗಳ ಮೇಲೆ ನಡೆಯುತ್ತಿರುವ ದೌರ್ಜನ್ಯ, ಚಿತ್ರಹಿಂಸೆಗಳನ್ನು ಸಿ.ಐ.ಟಿ.ಯು. ತೀವ್ರವಾಗಿ ಖಂಡಿಸುತ್ತದೆ. ಸಾಮಾಜಿಕ ಪ್ರಗತಿಗಾಗಿ ನಡೆಯುತ್ತಿರುವ ಹೋರಾಟಗಳನ್ನು ಹತ್ತಿಕ್ಕಿ ಇಸ್ಲಾಂ ಮೂಲಭೂತವಾದವನ್ನು ಪುನಶ್ಚೇತನಗೊಳಿಸುವುದಕ್ಕಾಗಿ ಇರಾನಿನ ಎಲ್ಲಾ ಕ್ರಾಂತಿಕಾರಿಗಳ ಮೇಲೂ ನಡೆಯುತ್ತಿರುವ ಆಕ್ರಮಣ ದಿಗ್ಭ್ರಮೆ ಹುಟ್ಟಿಸುತ್ತದೆ. ಎಲ್ಲಕ್ಕಿಂತ ಹೆಚ್ಚು ಖಂಡನೀಯವಾದುದೆಂದರೆ ಇಸ್ಲಾಮಿಕ ನ್ಯಾಯಾಲಯಗಳು ಸುಳ್ಳು ಆರೋಪಗಳು ಮತ್ತು ನಾಟಕೀಯ ವಿಚಾರಣೆಗಳ ಮೂಲಕ ಕ್ರಾಂತಿಕಾರಿಗಳನ್ನು ಸಾಮೂಹಿಕವಾಗಿ ಕೊಲ್ಲುವುದಾಗಿದೆ. ಸಾಮೂಹಿಕ ಬಂಧನಗಳು ಮತ್ತು ನೂರೆದ್ದೀನ್ ಕಿಯನೂರಿ (ಇರಾನಿನ ತುದೇ ಪಕ್ಷದ ಕೇಂದ್ರ ಸಮಿತಿಯ ಪ್ರಥಮ ಕಾರ್ಯದರ್ಶಿ) ಅವರನ್ನೊಳಗೊಂಡಂತೆ ಸ್ವಾತಂತ್ರ್ಯ ಹೋರಾಟಗಾರರನ್ನು ವಿಚಾರಣೆಯಿಲ್ಲದೆ ಬಂಧನದಲ್ಲಿರಿಸಿರುವುದು ದಬ್ಬಾಳಿಕೆಯ ಮತ್ತೊಂದು ಮುಖ.

ಇರಾನ್ ಜನತೆಯ ಪ್ರಗತಿ, ಸಾಮಾಜಿಕ ಹಕ್ಕುಗಳು ಮತ್ತು ಸ್ವಾತಂತ್ರ್ಯವನ್ನು ಕಸಿಯುವುದರ ವಿರುದ್ಧ, ಇಸ್ಲಾಮಿಕ್ ಮೂಲಭೂತ ವಾದವನ್ನು ಪುನಶ್ಚೇತನಗೊಳಿಸುವುದರ ವಿರುದ್ಧ ಹೋರಾಟ ನಡೆಸುತ್ತಿರುವ ಇರಾನಿನ ಕ್ರಾಂತಿಕಾರಿಗಳಿಗೆ ಸಿ. ಐ. ಟಿ. ಯು. ತನ್ನ ಸೌಹಾರ್ದ ಬೆಂಬಲವನ್ನು ವ್ಯಕ್ತಪಡಿಸಿದೆ. ತುದೇ ಪಕ್ಷದ ಕಾ. ಕಿಯನೂರಿ ಮತ್ತು ಇತರ ನಾಯಕರನ್ನೂ ಹಾಗೂ ಎಲ್ಲಾ ಕ್ರಾಂತಿಕಾರಿಗಳನ್ನು ಬೇಷರತ್ತಾಗಿ ಬಿಡುಗಡೆಗೊಳಿಸಬೇಕೆಂದು ಸಿ.ಐ.ಟಿ.ಯು. ಒತ್ತಾಯಿಸುತ್ತದೆ.

ಪ್ಲ್ಯೆವುಡ್ ಕಾರ್ಮಿಕರಿಗೆ ಕನಿಷ್ಠ ಕೂಲಿಗೆ ಒತ್ತಾಯ

ತಾರೀಖು 19–6–1983ರಂದು ಸೌತ್ ಕೆನರಾ ಡಿಸ್ಟ್ರಿಕ್ಟ್ ಪ್ಲ್ಯೆವುಡ್ ವರ್ಕರ್ಸ್ ಯೂನಿಯನ್ನಿನ ಕಾರ್ಯಕಾರಿ ಸಮಿತಿಯು ಸಂಘದ ಅಧ್ಯಕ್ಷರಾದ ಕಾ। ಕೆ ಮೂಸಬ್ಬನವರ ಅಧ್ಯಕ್ಷತೆಯಲ್ಲಿ ಸೇರಿತು. ಕಾರ್ಯದರ್ಶಿಯವರಾದ ಕಾ। ಕೆ. ಶಂಕರ್‌ರವರು ಸಂಘದ ವರದಿಯನ್ನು ಮಂಡಿಸಿದರು.

ಪ್ಲ್ಯೆವುಡ್ ಕೈಗಾರಿಕೆಯಲ್ಲಿ ಕಾರ್ಮಿಕರಿಗೆ ಕನಿಷ್ಠ ಕೂಲಿ ಇನ್ನೂ ಜ್ಯಾರಿ ಮಾಡದ ಹಾಗೂ ಬೆಲೆ ಏರಿಕೆಯನ್ನು ತಡೆಗಟ್ಟದ ಸರಕಾರದ ನೀತಿಯನ್ನು ಖಂಡಿಸಲಾಯಿತು. ಮಾಲಕ ಮತ್ತು ಮಜೂರರ ಪ್ರತಿನಿಧಿಗಳನ್ನು ಕರೆದು, ಸರಕಾರದ ಅಧಿಕಾರಿಗಳಿದ್ದ ತ್ರಿಪಕ್ಷೀಯ ಸಭೆಯಲ್ಲಿ ಕನಿಷ್ಠ ಕೂಲಿಯನ್ನು ನಿರ್ಣಯಿಸಿ, ಕೂಡಲೇ 1983ನೇ ಜನವರಿ ಒಂದರಿಂದ ಕಾರ್ಮಿಕರಿಗೆ ಸಿಗುವಂತೆ ಕ್ರಮವಹಿಸಬೇಕೆಂಬ ನಿರ್ಣಯವನ್ನು ಕೈಗೊಂಡು ಸರಕಾರವನ್ನು ಒತ್ತಾಯಿಸಿರುತ್ತದೆ, ಹಾಗೂ ಮೇ ದಿನವನ್ನು ವೇತನ ಸಹಿತ ರಜಾ ದಿನವನ್ನಾಗಿ ಘೋಷಿಸಬೇಕೆಂದು ಸಮಿತಿಯು ಒತ್ತಾಯಪಡಿಸಿರುತ್ತದೆ.

ಮತದಾನದ ಉಪಯೋಗ

(5ನೇ ಪುಟದಿಂದ)

ಹೆಚ್ಚಿನ ಬಲಿದಾನ ಆವಶ್ಯಕವಾಗಬಹುದು.

ಜಾಗತಿಕ ಇತಿಹಾಸದ ವ್ಯಂಗ್ಯ ಎಲ್ಲವನ್ನೂ ತಲೆಕೆಳಗಾಗಿಸುತ್ತದೆ. ನಾವು ಕ್ರಾಂತಿಕಾರಿಗಳು, ವಿಧ್ವಂಸಕರು-ನಾವು ಶಾಸನಬದ್ಧ ವಿಧಾನಗಳಲ್ಲಿಯೇ ಚೆನ್ನಾಗಿ ಬೆಳೆಯುತ್ತಿದ್ದೇವೆ. ಸುಸ್ಥಿತಿ ಪಕ್ಷಗಳೆಂದು (ಜರ್ಮನಿಯ ಪಾರ್ಟಿ ಆಫ್ ಆರ್ಡರ್) ತಮ್ಮನ್ನು ತಾವೇ ಕರೆದುಕೊಳ್ಳುವವರು ತಾವು ನಿರ್ಮಿಸಿದ ಶಾಸನ ಜಾಲಗಳಲ್ಲಿ ಕುಗ್ಗಿ ನಾಶವಾಗುತ್ತಿದ್ದಾರೆ. "ಶಾಸನ ಬದ್ಧತೆಯೇ ನಮಗೆ ಮೃತ್ಯುವಾಗಿ ಪರಿಣಮಿಸಿದೆ" ಎಂದು. ಆದರೆ ನಾವು ಈ ಶಾಸನಬದ್ಧ ಚಟುವಟಿಕೆಗಳಿಂದ ದೃಢವಾದ ಸ್ನಾಯುಗಳು, ತುಂಬಿದ ಕೆನ್ನೆಗಳು ಕೂಡಿ ಇದೇ ಚಿರಜೀವವನ್ನು ಪಡೆದಂತೆ ಬೆಳೆಯುತ್ತಿದ್ದೇವೆ. ನಾವು ಅವರನ್ನು ಸಂತೋಷಪಡಿಸಲು ಬೀದಿಕಾಳಗಕ್ಕೆ ಒಪ್ಪಿಕೊಳ್ಳುವಷ್ಟು ಹುಚ್ಚರಾಗಿದ್ದಾರೆ. ಅವರಿಗೆ ತಮಗೇ ಮುಳುವಾದ ಶಾಸನಗಳನ್ನು ಮುರಿಯದ ಹೊರತು ಬೇರೆ ಮಾರ್ಗವೇ ಉಳಿಯುವುದಿಲ್ಲ.

ಈ ಮಧ್ಯೆ ಸರ್ಕಾರಗಳನ್ನು ಉರುಳಿಸುವುದರ ವಿರುದ್ಧ ಮತ್ತಷ್ಟು ಕಾನೂನುಗಳು ಬರುತ್ತವೆ, ಮತ್ತು ಎಲ್ಲವೂ ತಲೆಕೆಳಕಾಗುತ್ತದೆ ಇಂದು ಸರ್ಕಾರವನ್ನು ಉರುಳಿಸುವುದರ ಬಗ್ಗೆ ಗದ್ದಲ ಮಾಡುತ್ತಿರುವ ಇವರೇ ಹಿಂದಿನ ಸರ್ಕಾರವನ್ನು ಉರುಳಿಸಿದವರಲ್ಲವೇ ? 1866ರ ಅಂತರ್ಯುದ್ಧವನ್ನು ಸಾರಿದವರು ನಾವೋ ಅವರೋ ಹ್ಯಾನೋವರಿನ ರಾಜನನ್ನು ಹೆಪ್ಸೆಯ ಅಧಿಪತಿಯನ್ನು ನಾಸ್ಸಾವುದದ ಯುವರಾಜನನ್ನು ಅವರ ವಂಶಪಾರಂಪರ್ಯ ಪಾಳೆಯಪಟ್ಟುಗಳಿಂದ ಓಡಿಸಿದವರು ಮತ್ತು ಅದನ್ನು ಆಕ್ರಮಿಸಿದ್ದು ನಾವೇನು ? ಈಗ ಈ ವಿಧ್ವಂಸಕರು ಹಿಂದಿನ ಜರ್ಮನ್ ಒಕ್ಕೂಟದ ಮತ್ತು ಮೂರು ರಾಜಸತ್ತೆಗಳನ್ನು ಕಿತ್ತುಹಾಕಿದವರು ತಮ್ಮ ಸರ್ಕಾರವನ್ನು ಉರುಳಿಸುವುದರ ವಿರುದ್ಧ ಮಾತನಾಡುವರೆ ?

ಅವರು ತಮ್ಮ ವಿರುದ್ಧ ಕಾನೂನುಗಳನ್ನು ಮಾಡಲಿ. ಮತ್ತಷ್ಟು ಕರಾಳವಾಗಿಸಲಿ. ಇಡೀ ಕಾನೂನಿನ ನ್ಯಾಯ ಸೂತ್ರಗಳನ್ನು ರಬ್ಬರಿನಂತೆ ಸಾಧ್ಯವಾದಷ್ಟೂ ಹಿಗ್ಗಿಸಲಿ. ಅವರಿಗೆ ತಮ್ಮ ಷಂಡತನದ ಬಗ್ಗೆ ಹೊಸದೊಂದು ರುಜುವಾತಲ್ಲದೆ ಇನ್ನೇನು ಸಿಗುವುದಿಲ್ಲ ಅವರು ಸೋಷಿಯಲ್ ಡೆಮೊಕ್ರಸಿಗೆ ಹಾನಿಯುಂಟುಮಾಡಬೇಕಿದ್ದರೆ ಇದರ ಜೊತೆಗೆ ಮತ್ತಷ್ಟು ಕ್ರಮಗಳನ್ನು ಕೈಕೊಳ್ಳಬೇಕಾಗುತ್ತದೆ. ಕಾನೂನಿನ ಚೌಕಟ್ಟಿನಲ್ಲಿ ತನ್ನ ಕೆಲಸವನ್ನು ನೆರವೇರಿಸುತ್ತಿರುವ ಸೋಷಿಯಲ್ ಡೆಮೊಕ್ರಸಿಯಿಂದ ಸರ್ಕಾರ ಉರುಳುವುದನ್ನು ತಡೆಯಬೇಕಾದರೆ ಸ್ವತಃ ಕಾನೂನನ್ನು ಮುರಿಯದೆ ಸಾಧ್ಯವಾಗುವುದಿಲ್ಲ. ಪ್ರಷ್ಯನ್ ಅಧಿಕಾರಿ ಶ್ರೀ ರೂಸಲರ್, ಪ್ರಷ್ಯನ್ ದಂಡನಾಯಕ ಶ್ರೀವಾನ್ ಬೊಗುಸ್ಲಾವ್‌ಸ್ಕಿ ದಾರಿಯನ್ನು ತೋರಿಸಿದ್ದಾರೆ. ಬೀದಿಕಾಳಗಕ್ಕಿಳಿಯಲು ನಿರಾಕರಿಸುತ್ತಿರುವ ಕಾರ್ಮಿಕರನ್ನು ಸದೆಬಡಿಯಲು ಇರುವ ಒಂದೇ ದಾರಿಯನ್ನು ತೋರಿಸಿದ್ದಾರೆ. ಸರ್ವಾಧಿಕಾರೀ ಸಂವಿಧಾನವನ್ನು ಮುರಿಯುವುದು. ನಿರಂಕುಶ ಪ್ರಭುತ್ವಕ್ಕೆ ಹಿಂದಿರುಗುವುದು ರಾಜನು ಹೇಳಿದ್ದೇ ಅತ್ಯುಚ್ಚ ಕಾನೂನು ಆದುದರಿಂದ ಬಂಡವಾಳಶಾಹಿ ಮಾನನೀಯರೆ ಧೈರ್ಯ ತಂದುಕೊಳ್ಳಿ. ಇಲ್ಲಿ ಅರೆಬರೆ ಕ್ರಮ ಏನೂ ಪ್ರಯೋಜನವಾಗುವುದಿಲ್ಲ ಪೂರ್ತಿಯಾಗಿ ಮುಳುಗಬೇಕಾಗುತ್ತದೆ.

ಆದರೆ ಮರೆಯದಿರಿ. ಜರ್ಮನ್ ಸಾಮ್ರಾಜ್ಯ ಕೂಡಾ ಎಲ್ಲಾ ಸಣ್ಣ ರಾಜ್ಯಗಳಂತೆ. ಆಧುನಿಕ ರಾಜ್ಯಗಳಂತೆ ಒಂದು ಒಪ್ಪಂದದ ಫಲ. ಮೊದಲಿಗೆ ಒಬ್ಬ ರಾಜ ಮತ್ತೊಬ್ಬ ರಾಜನೊಡನೆ ಮಾಡಿದ ಒಪ್ಪಂದ ಎರಡನೆಯದು ರಾಜರ ಮತ್ತು ಜನತೆಯ ನಡುವಿನ ಒಪ್ಪಂದದ ಫಲ. ಒಂದು ಪಕ್ಷ ಒಪ್ಪಂದವನ್ನು ಮುರಿದರೆ ಇಡೀ ಒಪ್ಪಂದವೇ ಕುಸಿಯುತ್ತದೆ. ಮತ್ತೊಂದು ಪಕ್ಷಕ್ಕೆ ಒಪ್ಪಂದವನ್ನು ಪಾಲಿಸಬೇಕಾದ ಯಾವ ಬಾಧ್ಯತೆಯೂ ಇರುವುದಿಲ್ಲ. ಈ ಬಗ್ಗೆ ಸ್ವತಃ ಬಿಸ್‌ಮಾರ್ಕನೇ 1866ರಲ್ಲಿ ಮಾರ್ಗದರ್ಶಿಯಾಗಿದ್ದಾನೆ. ಆದುದರಿಂದ ನೀವು ಸಂವಿಧಾನವನ್ನು ಮುರಿದರೆ ಸೋಷಿಯಲ್ ಡೆಮಾಕ್ರಸಿ ತನಗೆ ತೋಚಿದಂತೆ ಮಾಡುವುದಕ್ಕೆ ಪೂರ್ಣ ಸ್ವಾತಂತ್ರ್ಯ. ಆಗ ನಾವೇನು ಮಾಡುತ್ತೇವೆ ಎಂಬುದನ್ನು ಈಗ ಯಾಕೆ ಹೇಳೋಣ ?

ಕುಂದಾಪುರ :

ಡಿ.ವೈ.ಎಫ್.ಐ.ನಿಂದ ರಾಷ್ಟ್ರೀಯ ಏಕತಾ ದಿನ

ಡಿ.ವೈ.ಎಫ್.ಐ. ಕೇಂದ್ರ ಸಮಿತಿಯ ಕರೆಯ ಮೇರೆಗೆ ಕುಂದಾಪುರ ತಾಲ್ಲೂಕು ಸಮಿತಿಯು ಬಹಿರಂಗ ಸಭೆ ನಡೆಸುವುದರ ಮೂಲಕ ಪ್ರಾತಿನಿಧಿಕವಾಗಿ "ರಾಷ್ಟ್ರೀಯ ಏಕತಾದಿನ" ವನ್ನು ಆಚರಿಸಿತು. ಡಿ.ವೈ.ಎಫ್.ಐ. ರಾಜ್ಯ ಸಂಘಟನಾ ಸಮಿತಿ ಸದಸ್ಯ ಮಹಾಬಲ ವಡೇರಹೋಬಳಿಯವರ ಅಧ್ಯಕ್ಷತೆಯಲ್ಲಿ ಸಮುದಾಯ ಸಭಾಂಗಣದಲ್ಲಿ ಈ ಸಭೆ ಜರುಗಿತು.

ಸಭೆಯಲ್ಲಿ ಮಾತನಾಡಿದವರು, ಬ್ರಿಟಿಷರು ತಮ್ಮ ಆಳ್ವಿಕೆಯನ್ನು ಮುಂದುವರಿಸಲು 'ಒಡೆದು ಆಳುವ ನೀತಿ' ಯನ್ನು ಉಪಯೋಗಿಸಿದಂತೆ, ಈಗಿನ ಆಳುವ ಸರಕಾರ ಕೂಡ ಜನರ ಮಧ್ಯೆ ಒಡಕನ್ನುಂಟು ಮಾಡಲು ಜಾತಿ ಮತಗಳ ಭಾವನೆಗಳನ್ನು ಬಿತ್ತುತ್ತಿದ್ದಾರೆ ಎಂದು ಹೇಳಿದರು. ದೇಶದ ಆಸ್ಸಾಂ, ಪಂಜಾಬ್ ಇತ್ಯಾದಿ ಕಡೆಗಳಲ್ಲಿ ನಡೆಯುತ್ತಿರುವ ಅಪಾಯಕರ ಛಿದ್ರಕಾರಿ ಚಳವಳಿಗಳ ಹಿಂದೆ ಸಾಮ್ರಾಜ್ಯಶಾಹಿಗಳ ಪಿತೂರಿಯಿದ್ದು, ಇದಕ್ಕೆ ಪೂರಕವಾಗಿ ಆಳುವ ಪಕ್ಷ ಹಾಗೂ ಪ್ರತಿಗಾಮಿ, ಕೋಮುವಾದಿ ಸಂಘಟನೆಗಳು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಹೇಗೆ ಬೆಂಬಲ ನೀಡುತ್ತಿವೆ ಎಂದು ವಿವರಿಸಿದರು.

ಭಾಷಣಕಾರರಾದ ಡಿ.ವೈ.ಎಫ್.ಐ. ನ ಆನಂದ ಭಂಡಾರಿ, ಶಿವಾನಂದ ಕೋಡಿ, ಕೆ. ಶಂಕರ್ (ಸಿ.ಐ.ಟಿ.ಯು.) ಟೆಲಿಫೋನ್ ನೌಕರರ ಸಂಘದ ಮುಕುಂದನ್, ಎಸ್.ಎಫ್.ಐ. ದ.ಕ. ಜಿಲ್ಲಾ ಸಮಿತಿ ಅಧ್ಯಕ್ಷ ಕೆ. ವಿಶ್ವನಾಥ, ಇವರೆಲ್ಲ ಡಿ.ವೈ.ಎಫ್.ಐ. ಸಂಘಟನೆಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ವಿಸ್ತೃತವಾಗಿ, ಬಲಿಷ್ಠವಾಗಿ ಕಟ್ಟಿ, ಯುವಜನತೆ ವೈಚಾರಿಕತೆಯನ್ನು ಬೆಳೆಸಿಕೊಳ್ಳುವಂತೆ ಮಾಡುವ ಮಹತ್ತರ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸುವ ಪ್ರಯತ್ನ ಅವಶ್ಯವಾಗಿದೆಯೆಂದು ಒತ್ತಿ ಹೇಳಿದರು.

ಆರಂಭದಲ್ಲಿ ಕೆ. ಶಕುಂತಲ ಸ್ವಾಗತಿಸಿದರು ಎಚ್. ನರಸಿಂಹ ವಂದಿಸಿದರು.

ಶಿವಮೊಗ್ಗ

ಮುಖ್ಯಮಂತ್ರಿಗಳಿಗೆ ಮನವಿ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಿವಮೊಗ್ಗ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾ. ಕೆ. ಚಂದುಕುಟ್ಟಿ, ಬಡ ರೈತ ಸಂಘದ ಪತಿಯಿಂದ ಶ್ರೀನಿವಾಸ ಅಯ್ಯಂಗಾರ್ ಮತ್ತು ಮುನಿಸಿಪಲ್ ಕೌನ್ಸಿಲರ್ ಆಗಿರುವ ಶ್ರೀ ಸಿದ್ದಪ್ಪ ಅವರುಗಳು ಶಿವಮೊಗ್ಗದ ಡೆಪ್ಯುಟಿ ಕಮಿಷನರ್ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿಯೊಂದನ್ನು ಸಲ್ಲಿಸಿದ್ದಾರೆ.

ಕಾಳಸಂತೆಕೋರರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಸ್ವಾಗತಿಸುತ್ತಾ ಸರ್ಕಾರವನ್ನು ಬೆದರಿಸುವ ಉದ್ದೇಶದಿಂದ ವ್ಯಾಪಾರಿಗಳು ರೈತರೊಂದಿಗೆ ಅಸಹಕಾರವನ್ನು ಪ್ರಾರಂಭಿಸಿದ್ದಾರೆಂದೂ ಅದರ ಪರಿಣಾಮವಾಗಿ ಭತ್ತ ಮಾರುಕಟ್ಟೆಗೆ ಬರುವುದಕ್ಕೆ ಅಡ್ಡಿಯಾಗಿದೆಯೆಂಬುದಾಗಿ ಮನವಿಯಲ್ಲಿ ತಿಳಿಸಲಾಗಿದೆ.

ಈ ಪರಿಸ್ಥಿತಿಯು ಬೆಳೆಗಾರರಿಗೆ ತುಂಬಾ ಅನಾನುಕೂಲ ಉಂಟುಮಾಡುವುದರೊಂದಿಗೆ ಸರ್ಕಾರಕ್ಕೆ ಸವಾಲಾಗಿದೆ ವ್ಯಾಪಾರಿಗಳ ಮತ್ತು ಮಿಲ್ ಮಾಲೀಕರು ಒಡ್ಡಿರುವ ಈ ಸವಾಲನ್ನು ಸರ್ಕಾರವು ದೃಢವಾಗಿ ಎದುರಿಸದಿದ್ದಲ್ಲಿ ರೈತರು ತೀವ್ರಗಾದ ತೊಂದರೆಗೊಳಗಾಗುತ್ತಾರೆಂದೂ ಮತ್ತು ಅಕ್ಕಿಯು ಮಾರುಕಟ್ಟೆಯಿಂದ ಮಾಯವಾಗಬಹುದೆಂದು ಮನವಿಯಲ್ಲಿ ತಿಳಿಸಲಾಗಿದೆ.

ಈಗಿರುವ ಈ ಪರಿಸ್ಥಿತಿಯನ್ನು ಹತೋಟಿಗೆ ತರುವ ದಿಕ್ಕಿನಲ್ಲಿ ಜಿಲ್ಲೆಯಲ್ಲಿ ಗ್ರಾಹಕ ಕೇಂದ್ರಗಳನ್ನು ಪ್ರಾರಂಭಿಸಿ ಭತ್ತವನ್ನು ಮಾರುಕಟ್ಟೆ ಮೌಲ್ಯಕ್ಕೆ ತಕ್ಕಂತೆ ಖರೀದಿಸಿ ಗ್ರಾಹಕರ ದಿನನಿತ್ಯದ ಅವಶ್ಯಕತೆಗಳನ್ನು ಪೂರೈಸಬೇಕೆಂದು ಸರ್ಕಾರವನ್ನು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಜಿಲ್ಲೆಯಾದ್ಯಂತ ಇರುವ 60 ಅಕ್ರಮ ಸಾಗಾಣಿಕೆದಾರರ ಮತ್ತು ಕಳ್ಳಸಂತೆಕೋರರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ವಿನಂತಿಸಿದೆ.

ಧಾರವಾಡ

ರಾಷ್ಟ್ರೀಯ ಸಮಗ್ರತಾ ದಿನಾಚರಣೆಯ ಅಂಗವಾಗಿ ಕರಪತ್ರ ಹಂಚಿ, ಗೋಡೆ ಬರಹ ಮುಂತಾದ ಪ್ರಚಾರ ಕಾರ್ಯವನ್ನು ಮಾಡಲಾಗಿದೆ. ನಾಲ್ಕಾರು ಕಡೆ ಬಹಿರಂಗ ಸಭೆಗಳನ್ನು ನಡೆಸಲಾಯಿತು.

ರಾಷ್ಟ್ರೀಯ ಸಮಗ್ರತೆಯನ್ನು ಕಾಯ್ದುಕೊಳ್ಳುವುದರ ಬಗ್ಗೆ ವಿಚಿದ್ರಕಾರಿ ಶಕ್ತಿಗಳನ್ನು ಮೂಲೋಚ್ಚಾಟನೆ ಮಾಡುವವರೆವಿಗೂ ಡಿ.ವೈ.ಎಫ್.ನ ಸತತ ಹೋರಾಟವಿದೆ ಎಂದು ಅಸ್ಸಾಂನಲ್ಲಿ ವಾಸಿಸುವ ಅಲ್ಪ ಸಂಖ್ಯಾತರನ್ನು ರಕ್ಷಿಸಬೇಕೆಂದೂ ರಾಜ್ಯ ಸಂಘಟನಾ ಸಮಿತಿಯ ಸದಸ್ಯರುಗಳಾದ ಕಾಂ। ವಿ. ಜಿ. ಕಮ್ಮಾರ್, ಚಿದಾನಂದ ತೆಗ್ಗಿಹಳ್ಳಿ ಹಾಗೂ ಜಿಲ್ಲಾ ಸಂಚಾಲಕರಾದ ಜಿ. ವೈ. ಸಿ. ಮಠ ಮತ್ತಿತರ ಸಂಗಾತಿಗಳು ಸಾರ್ವಜನಿಕರಲ್ಲಿ ವಿನಂತಿಸಿಕೊಂಡರು.

ಕರ್ನಾಟಕದಲ್ಲಿ ಬರಗಾಲ ಪರಿಸ್ಥಿತಿ ಯಾಕೆ?

(4ನೇ ಪುಟದಿಂದ)

ಕಾರ್ಯಗಳನ್ನು ಪರಿಣಾಮಕಾರಿಯಾಗಿ ತುರ್ತಿನಲ್ಲಿ ಕಾರ್ಯಗತಗೊಳಿಸುತ್ತಿಲ್ಲ. ಕೋಲಾರದಲ್ಲಿ ಜಿಲ್ಲಾ ಅಧಿಕಾರಿಗಳು ಪರಿಹಾರ ಕಾರ್ಯಗಳನ್ನು ಸಕಾಲದಲ್ಲಿ ಪರೀಕ್ಷಿಸದೆ, ರೂ 11 ಲಕ್ಷ ಪರಿಹಾರ ನಿಧಿಯು 31–3–83ಕ್ಕೆ ಕಾಲಭಾಧಿತವಾಗಿ ವಿನಿಯೋಗವಾಗದೇ ಇದ್ದುದು ಆಡಳಿತ ಅಲಕ್ಷತೆಯು ಅಕ್ಷಮ್ಯ ಅಪರಾಧಕ್ಕೊಂದು ನಿದರ್ಶನ. ಪಂಚಾಯತುಗಳಿಗೆ ಇನ್ನೂ ಚುನಾವಣೆ ಆಗಬೇಕಷ್ಟೆ. ಆಮೇಲೆ ಅವುಗಳು ಚುರುಕುಗೊಳ್ಳಬೇಕಾಗಿದೆ.

ಕುಡಿಯುವ ನೀರಿನ ಸಮಸ್ಯೆ

ಬರಗಾಲಪೀಡಿತ ಪ್ರದೇಶಗಳಲ್ಲಿ ಇದು ಗಂಭೀರವಾಗಿದೆ. ಕೆರೆ–ಬಾವಿ, ಕುಂಟೆ, ನದಿ ಬತ್ತಿಹೋಗಿವೆ. ಕುಡಿಯುವ ನೀರಿಗಾಗಿ ಗ್ರಾಮೀಣ ಜನರು ಹಗಲು ರಾತ್ರಿ ಬಹುದೂರ ಹೋಗಿ ಬರಬೇಕಾಗುವುದು. ಅತಿ ದೂರದ ಅತ್ಯಲ್ಪ ನೀರಿಗಾಗಿ ತೀವ್ರ ಕಚ್ಚಾಟಗಳು ನಡೆಯುವುವು. ತೂತು ಬಾವಿಗಳನ್ನು (ಬೋರ್‌ವೆಲ್) ತೋಡುವ ಕಾರ್ಯಕ್ರಮ ತೃಪ್ತಿಕರವಾಗಿಲ್ಲ. ಇದ್ದ ತೂತು ಬಾವಿಗಳಲ್ಲಿ ಹಲವಾರು ನಿಷ್ಪ್ರಯೋಜಕವಾಗಿವೆ, ಅವುಗಳ ಪಂಪುಗಳು ಹಾಳಾಗಿವೆ. ಕೆಲವು ಬಾವಿಗಳಿಂದ ನಿರ್ಮಲ ನೀರು ಬರುತ್ತಿಲ್ಲ. ಹೊಸ ಬಾವಿಗಳನ್ನು ಎಲ್ಲಿ ತೋಡಬೇಕೆಂಬ ವಿಷಯದಲ್ಲಿ ಒಮ್ಮತವಿಲ್ಲ. ತೋಡಿದ ಬಾವಿಗಳಿಗೆ ಕೈ ಪಂಪುಗಳನ್ನು ಸಾಕಷ್ಟು ಇಡಲಿಲ್ಲ. ಅಗತ್ಯತೆಗನುಗುಣವಾಗಿ ತೂತು ಬಾವಿಗಳಿಲ್ಲ. ಕೆಲವೆಡೆಗಳಲ್ಲಿ 500 ರಿಂದ 3000 ಜನರಿಗೆ ಒಂದು ತೂತು ಬಾವಿ ಮಾತ್ರ! ತೂತು ಬಾವಿಗಳನ್ನು ತೋಡಲು ಹಣದ ಅಭಾವ, ತಂತ್ರಜ್ಞರ ಹಾಗೂ ಯಂತ್ರಗಳ ಅಭಾವ. ಒಂದು ತೂತುಬಾವಿ ತೋಡಲು 8–10 ದಿನಗಳು ಸಾಕಾದರೂ, ಅಧಿಕಾರಿಗಳ ಅಲಕ್ಷದಿಂದ ಎರಡು ತಿಂಗಳಾದರೂ ಬಾವಿ ತೋಡುವ ಕೆಲಸ ಮುಗಿಯುವುದಿಲ್ಲ. ಹಲವು ಸಂದರ್ಭಗಳಲ್ಲಿ ಬಾವಿತೋಡಿ ನೀರು ಬಾರದೆ ಅನವಶ್ಯಕ ನಷ್ಟ. ಕಂಟ್ರಾಕ್ಟರುಗಳು, ಅಧಿಕಾರಿಗಳು ಅಕ್ರಮ ಲಾಭ ಗಿಟ್ಟಿಸುತ್ತಾರೆ. ತೆರೆದ ಬಾವಿ ತೋಡಲು ಇನ್ನಷ್ಟು ವಿಳಂಬ. ಉದಾಹರಣೆಗೆ ಶಿವಮೊಗ್ಗ ಜಿಲ್ಲೆಯಲ್ಲಿ 1982–83ರಲ್ಲಿ ಒಂದೇ ಒಂದು ತೆರೆದ ಬಾವಿ ತೋಡಲಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ಕೇವಲ 41 ಬಾವಿಗಳನ್ನು ತೋಡಲಾಗಿದೆ! ಕೆಲವು ಪ್ರದೇಶಗಳಲ್ಲೂ (ಉದಾ: ರಾಯಚೂರು) ಟ್ಯಾಂಕರುಗಳ ಮೂಲಕ ಕುಡಿಯುವ ನೀರಿನ ಹಂಚಿಕೆಯಾಗುತ್ತಿದ್ದರೂ, ಟ್ಯಾಂಕರುಗಳ ಅಭಾವ, ಅವುಗಳಿಗೆ ಬಾಡಿಗೆ ತೆರಲು ಸ್ಥಳೀಯ ಆಡಳಿತಗಳಿಗೆ ಹಣದ ಅಭಾವ, ಖಾಸಗೀ ಟ್ಯಾಂಕರುಗಳ ವಿಪರೀತ ಬಾಡಿಗೆ ಅಥವಾ ಕಾಲಕ್ಕೆ ಸರಿಯಾಗಿ ದೊರಕದಿರುವುದು. ಇತ್ಯಾದಿ ಸಮಸ್ಯೆಗಳು. ಕುಡಿಯುವ ನೀರಿನ ಅಭಾವದಿಂದಾಗಿ ಕೆಲವೆಡೆಗಳಲ್ಲಿ ಕಾಲೇರಾದಂತಹ ಸಾಂಕ್ರಾಮಿಕ ರೋಗ ಹರಡುವ ಭಯವಿದೆ.

ಬಡ ಜನರ ವಲಸೆ

ಕ್ಷಾಮ ಪರಿಹಾರ ಕಾರ್ಯಗಳು ತುಂಬಾ ಸಮರ್ಪಕವಾಗಿರುವುದರಿಂದ ಗ್ರಾಮೀಣ ಬಡಜನರು ಬಹು ಸಂಖ್ಯೆಯಲ್ಲಿ ನಗರ ಪ್ರದೇಶಗಳಿಗೂ ನೆರೆ ರಾಜ್ಯಗಳಿಗೂ ವಲಸೆ ಹೋಗುತ್ತಿದ್ದಾರೆ. ಕಾಫಿ ತೋಟ ಮತ್ತಿತರ ಹೊರ ಪ್ರದೇಶಗಳಲ್ಲಿ ದಿನಕೂಲಿ ರೂ. 8–10, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಲ್ಲಿ ದಿನಕೂಲಿ ರೂ. 6-50, ಆದರೆ ಕ್ಷಾಮ ಪರಿಹಾರ ಕಾರ್ಯಗಳಲ್ಲಿ ದಿನಕೂಲಿ ರೂ. 5 ಮಾತ್ರ. ಕ್ಷಾಮ ಪರಿಹಾರದ ಅಂಗವಾಗಿ ಸಾವಿರಾರು ಸಂತ್ರಸ್ತ ಜನರಿಗೆ ದೀರ್ಘಕಾಲ ಉದ್ಯೋಗಾವಕಾಶ ನೀಡಬೇಕಾಗಿದ್ದರೂ, ಸರಕಾರದ ಆಡಳಿತ ಯಂತ್ರದಿಂದ ಕೆಲವೇ ಜನರಿಗೆ ಕೆಲವೇ ದಿನಗಳಿಗೆ ಅಲ್ಪ ಪರಿಹಾರವಾಗಿ ಉದ್ಯೋಗ ಕೊಡಲು ಸಾಧ್ಯವಾಗಿದೆ. ಪರಿಣಾಮವಾಗಿ ಅನಿವಾರ್ಯವಾಗಿ ಕೃಷಿ ಕಾರ್ಮಿಕರು, ಬಡರೈತರು, ಕೈಕಸಬುದಾರರು ಬಹುಸಂಖ್ಯೆಯಲ್ಲಿ ವಲಸೆ ಹೋಗುತ್ತಿರುವುದು, ತಮ್ಮ ಚಿನ್ನ, ಬೆಳ್ಳಿ ಆಭರಣಗಳನ್ನೂ, ದನಕರುಗಳನ್ನೂ, ಧಾನ್ಯ ಶೇಖರಣೆಗಳನ್ನೂ ಕಳೆದುಕೊಂಡು ನಿರ್ಗತಿಕರಾಗುತ್ತಿರುವುದು. ಬೆಂಗಳೂರಿನ ಸುತ್ತ ಮುತ್ತಲಿನ ಕೊಳಚೆ ಪ್ರದೇಶಗಳಲ್ಲಿನ ಹೆಚ್ಚಿನ ಜನರು 1972ರ ಭೀಕರ ಬರಗಾಲಕ್ಕೆ ತುತ್ತಾದ ವಲಸೆ ಬಂದ ಜನರೇ ಆಗಿದ್ದಾರೆ. ಇತ್ತೀಚೆಗೆ ಗೋವಾದಲ್ಲಿ ಕನ್ನಡ ವಿರೋಧಿ ಚಳವಳಿಯು ವಿಕೋಪಕ್ಕೆ ಒಳಗಾದವರು ಧಾರವಾಡ ಜಿಲ್ಲೆಯ ಕ್ಷಾಮ ಪೀಡಿತ ಪ್ರದೇಶಗಳಿಂದ ವಲಸೆ ಹೋದ ಬಡ ಜನರೇ ಆಗಿದ್ದಾರೆ. ತುರ್ತಿನ ಪರಿಹಾರವೇ ಇಷ್ಟು ಅಸಮರ್ಪಕವಾದರೆ, ಬರಗಾಲ ಕ್ಷಾಮಗಳಿಗೆ ಖಾಯಂ ಪರಿಹಾರ ಹೇಗೆ ಸಾಧ್ಯ?

ಸಂಘಟನೆ ಹೋರಾಟ

ಸಂತ್ರಸ್ತ ಜನರು ಅಲ್ಲಲ್ಲಿ ಸಂಘಟಿತರಾಗುತ್ತಿದ್ದು ಹೋರಾಟದ ದಾರಿಯಲ್ಲಿದ್ದಾರೆ. ಪಾದಯಾತ್ರೆ, ಮೆರವಣಿಗೆ, ಮನವಿ, ಮುಷ್ಕರಗಳ ವರದಿಗಳು ಅನೇಕ ಕಡೆಗಳಿಂದ ಬರುತ್ತವೆ. ಪರಿಹಾರ ಕಾರ್ಯಕ್ರಮಗಳು ಯಶಸ್ವಿಯಾಗಲು ಪಂಚಾಯತುಗಳು ಪ. ಬಂಗಾಳದಂತೆ ಪ್ರಜಾಸತ್ತಾತ್ಮಕವಾಗಿ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬೇಕು. ಜನತಾ ಪ್ರತಿನಿಧಿಗಳು ಆಡಳಿತ ಅಧಿಕಾರಿಗಳನ್ನು ನಿರ್ದೇಶಿಸುವಂತಾಗಿರಬೇಕು. ಸರಕಾರ ಪಂಚಾಯತುಗಳಿಗೆ ಹೆಚ್ಚಿನ ಹಣಕಾಸು ಸೌಲಭ್ಯ ನೀಡಬೇಕು. ಕೆರೆ, ಬಾವಿ, ಕುಂಟೆ, ನದಿಗಳಿಗೆ ಒಡ್ಡು ಇತ್ಯಾದಿ ಸಣ್ಣ ನೀರಾವರಿಗಳನ್ನು ತುರ್ತಾಗಿ ಕೈಕೊಳ್ಳಬೇಕು. ದುರದೃಷ್ಟದಿಂದ ಭೂ ಮಾಲಿಕ ಬಂಡವಾಳಶಾಹಿ ಸಮಾಜದಲ್ಲಿ ನೆರೆ ಬರಗಾಲದಂತಹ ದುಃಸ್ಥಿತಿಗಳಲ್ಲಿಯೇ ಜನರನ್ನು ಶೋಷಿಸಿ, ಅಗ್ಗದ ಕೂಲಿ ಮಾಡಿಸಿ, ಅವರ ಆಸ್ತಿ ಕಬಳಿಸಲಾಗುತ್ತಿದೆ. ಅಧಿಕಾರಿಗಳು, ಕಂಟ್ರಾಕ್ಟರುಗಳು, ಸ್ವಾರ್ಥ ರಾಜಕೀಯ ಪುಢಾರಿಗಳು ಲಾಭಗಳಿಸುತ್ತಿದ್ದಾರೆ. ರೈತರು ಕೃಷಿ ಕಾರ್ಮಿಕರು ಎಚ್ಚೆತ್ತು ತಮ್ಮ ಹಕ್ಕುಗಳಿಗಾಗಿ ಹೋರಾಟ ಹರಿತಗೊಳಿಸಬೇಕಾಗಿದೆ.

"ಡಿ. ವೈ. ಎಫ್. ಐ. ಗೆ ಸದಸ್ಯರಾಗಿರಿ" ಕಾರ್ಯಕ್ರಮ

4–6–83ರಂದು ಬೆಂಗಳೂರಿನಲ್ಲಿ ನಡೆದ ರಾಜ್ಯ ಸಂಘಟನಾ ಸಮಿತಿಯು ಜುಲೈ, ಆಗಸ್ಟ್, ಸೆಪ್ಟಂಬರ್ ಈ ಮೂರು ತಿಂಗಳುಗಳು ಸದಸ್ಯತ್ವ ನೊಂದಾಯಿಸುವ ಕಾರ್ಯಕ್ರಮ ಹಾಕಿಕೊಂಡಿದೆ.

ಸದಸ್ಯತ್ವ ಮಾಡಿಸಲು ಇಚ್ಛಿಸುವ ಸ್ನೇಹಿತರುಗಳು ಅಧಿಕೃತವಾಗಿ ಪತ್ರ ಬರೆದು, ಪುಸ್ತಕ, ಕರಪತ್ರಗಳನ್ನು ತರಿಸಿಕೊಳ್ಳಬೇಕೆಂದು ಸಂಘಟನಾ ಸಮಿತಿಯು ವಿನಂತಿಸಿದೆ.

ಸದಸ್ಯತ್ವ ನೊಂದಾಯಿಸುವ ಜಿಲ್ಲಾ, ತಾಲ್ಲೂಕು ಸಮಿತಿಗಳು ತಮ್ಮ ಶಕ್ತ್ಯಾನುಸಾರ ಬಾವುಟ, ಬ್ಯಾನರ್ಸ್, ಪ್ಲಕಾರ್ಡ್ಸ್ ಹಿಡಿದುಕೊಂಡು ಗುಂಪಾಗಿ ಹೋಗಿಯೂ ಸದಸ್ಯತ್ವ ನೊಂದಾಯಿಸಬಹುದು. ಅದಾಗದಿದ್ದರೆ ತಾವೇ ಸ್ವಂತ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕೆಂದು ಸಂಘಟನಾ ಸಮಿತಿಯ ವಿನಂತಿ. ಸಂಘಟನಾ ಸಮಿತಿಯನ್ನು ಸಂಪರ್ಕಿಸಿದವರಿಗೆ ಮಾತ್ರ ಪುಸ್ತಕ, ಕರಪತ್ರಗಳನ್ನು ಈಗಾಗಲೇ ಕಳುಹಿಸಲಾಗಿದೆ.

ಸದಸ್ಯತ್ವ ನೊಂದಾಯಿಸುವವರು ಸ್ಥಳೀಯ ಸಮಸ್ಯೆಗಳು, ರಾಜ್ಯ, ರಾಷ್ಟ್ರದ ಸಮಸ್ಯೆಗಳಿಗೆ ಹೆಚ್ಚು ಒತ್ತುಕೊಟ್ಟಿರಬೇಕು.

ರೀಗನ್‌ರ ಅಡ್ರೆಸ್ ಗೊತ್ತಿಲ್ಲದ ಅಮೇರಿಕದ ಅಂಚೆ ಇಲಾಖೆ

ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸಲು ಸಹಕರಿಸಬೇಕೆಂದು ಕೋರಿ ಸೋವಿಯತ್ ಯೂನಿಯನ್‌ನ ಶಾಲಾ ಬಾಲಕಿಯೊಬ್ಬಳು ಅಮೇರಿಕದ ಅಧ್ಯಕ್ಷ ರೀಗನರಿಗೆ ಒಂದು ಪತ್ರ ಬರೆದಿದ್ದಳು ಆದರೆ ಅಮೆರಿಕದ ಅಂಚೆ ಇಲಾಖೆ ಅವರ ವಿಳಾಸ ಸಿಕ್ಕಿಲ್ಲವೆಂದು ತಿಳಿಸಿ ಪತ್ರವನ್ನು ಆ ಬಾಲಕಿಗೆ ಹಿಂತಿರುಗಿಸಿದೆ.

ಕೆಲವು ದಿವಸಗಳ ಹಿಂದೆ ಅಮೇರಿಕದ ಶಾಲಾ ಬಾಲಕಿಯೊಬ್ಬಳು ಜಾಗತಿಕ ಶಾಂತಿಯನ್ನು ರಕ್ಷಿಸಬೇಕೆಂದು ವಿನಂತಿಸಿ ಸೋವಿಯೆತ್ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಯೂರಿ ಆಂದ್ರೋಪೋವ್ ಅವರಿಗೆ ಪತ್ರವೊಂದನ್ನು ಬರೆದಿದ್ದಳು.

ಅಂದ್ರೋಪೋವ್ ಅವರು ಆ ಬಾಲಕಿಯ ಪತ್ರಕ್ಕೆ ಪ್ರತ್ಯುತ್ತರ ಬರೆದು ಶಾಂತಿಯನ್ನು ಕಾಪಾಡಲು ತನ್ನಿಂದ ಸಾಧ್ಯವಾದ ಮಟ್ಟಿಗೆ ಪ್ರಯತ್ನಿಸುವುದಾಗಿ ಭರವಸೆ ನೀಡಿದ್ದಾರೆ ಅಷ್ಟೇ ಅಲ್ಲದೆ ಬಾಲಕಿಯನ್ನು ಅವಳ ಕುಟುಂಬದೊಂದಿಗೆ ಸೋವಿಯೆತ್ ಯೂನಿಯನ್‌ಗೆ ಆಹ್ವಾನಿಸಿದ್ದಾರೆ.

ಅಧ್ಯಕ್ಷ ರೀಗನರ ವಿಳಾಸ ಸಿಕ್ಕಿಲ್ಲವೆಂದು ಅಮೇರಿಕಾದ ಅಂಚೆ ಇಲಾಖೆ ಹಿಂತಿರುಗಿಸಿರುವ ಪತ್ರವನ್ನು 'ಪ್ರಾವ್ದಾ' ಪತ್ರಿಕೆ ಫೋಟೋದೊಂದಿಗೆ ಪ್ರಕಟಿಸಿದೆ. ಅಮೇರಿಕಾದ ಅಂಚೆ ಇಲಾಖೆಯ ಮುದ್ರೆಯಿರುವ ಆ ಪತ್ರದ ಮೇಲೆ 'ವಿಳಾಸ ಸಿಕ್ಕದೇ ಇರುವುದರಿಂದಾಗಿ ಇದನ್ನು ಹಿಂತಿರುಗಿಸಲಾಗುತ್ತಿದೆ ಎಂದು ಸೂಚಿಸಲಾಗಿದೆ.

ಈ ಬಗ್ಗೆ ತನ್ನ ಪ್ರತಿಕ್ರಿಯೆ ವ್ಯಕ್ತಪಡಿಸಿದ ರಶ್ಯನ್ ಶಾಲಾ ಬಾಲಕಿ ಡಯಾನಾ ಘೋಮಿನಾ "ನನ್ನ ಕಣ್ಣುಗಳನ್ನೇ ನನ್ನಿಂದ ನಂಬಲಾಗಲಿಲ್ಲ. ಶ್ವೇತ ಭವನ ಎಲ್ಲಿದೆಯೆಂದೂ ಕೂಡ ತಿಳಿಯದ ಅಮೇರಿಕಾದ ಅಂಚೆ ಇಲಾಖೆಯನ್ನು ಅರ್ಥಮಾಡಿಕೊಳ್ಳಲಾಗುತ್ತಿಲ್ಲ" ಎಂದಿದ್ದಾಳೆ.

ರೀಗನರ ವಿಳಾಸವನ್ನು ರಶ್ಯನ್ ಭಾಷೆಯಲ್ಲಿ ಬರೆಯಲಾಗಿದ್ದರೂ ಕೂಡ ಅಂಚೆ ಇಲಾಖೆಯ ನೌಕರರು ಅದನ್ನು ಇಂಗ್ಲೀಷಿನಲ್ಲಿ ಬರೆದಿದ್ದರೂ ಕೂಡ ಅಮೇರಿಕದ ಅಂಚೆ ಇಲಾಖೆಯವರು ವಿಳಾಸ ಪತ್ತೆಯಾಗಿಲ್ಲವೆಂದು ಆ ಪತ್ರವನ್ನು ಹಿಂತಿರುಗಿಸಿದ್ದಾರೆ.

ಪುದುಚೇರಿಯಲ್ಲಿ ಪ್ರಜಾಪ್ರಭುತ್ವದ ಕೊಲೆ

(ಒಂದನೇ ಪುಟದಿಂದ)

ನಿರಾಕರಿಸಿದ್ದರಿಂದ ಕೇಂದ್ರದ ಒಳಸಂಚು ವಿಫಲವಾಯಿತು. ಪುದುಚೇರಿಯಲ್ಲಿ ತನ್ನ ಹಸ್ತಕರೇ ಅಧಿಕಾರದಲ್ಲಿರುವುದರಿಂದ ತನ್ನ ಆಟ ನಡೆಸಲು ಇಂದಿರಾ ಗಾಂಧಿಗೆ ಸಾಧ್ಯವಾಗಿದೆ.

ಇಂದಿರಾ ಗಾಂಧಿ ಸರಕಾರದಿಂದ ಇಂಥ ಅಪಾಯವಿದೆಯೆಂದು ತಿಳಿದುಕೊಂಡೇ, ಈಗಿನ ಪರಿಸ್ಥಿತಿಯಲ್ಲಿ ಇಂದಿರಾ ಗಾಂಧಿಯ ಸರ್ವಾಧಿಕಾರಿ ಶಕ್ತಿಯೇ ಪ್ರಜಾ ಪ್ರಭುತ್ವಕ್ಕೆ ಮಾರಕವಾಗಿರುವುದರಿಂದ ಆಕೆಯನ್ನು ಸೋಲಿಸಲು ಎಲ್ಲ ವಿರೋಧ ಪಕ್ಷಗಳ ಜೊತೆ ಸೇರಿ ಹೋರಾಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ಸ್ಪಷ್ಟವಾಗಿ ಹೇಳುತ್ತದೆ. ಬಲ ಕಮ್ಯೂನಿಸ್ಟರಿಗೆ ಈ ಗಂಭೀರ ಗಂಡಾಂತರದ ಅರಿವು ಇನ್ನೂ ಆಗುತ್ತಿಲ್ಲ. ಆದ್ದರಿಂದ ಜಲಂಧರ ಸಮ್ಮೇಳನ ನಂತರ ಕೂಡ ಹಲವಾರು ಸಂದರ್ಭಗಳಲ್ಲಿ ಅದು ಎಡವಿ ಬಿದ್ದಿದೆ. ಆದರೆ ಮತ್ತೆ ಚೇತರಿಸಿಕೊಂಡು ಸಂಯುಕ್ತ ಸಭೆಗಳಲ್ಲಿ ಪಾಲ್ಗೊಳ್ಳುತ್ತಿದೆ.

ಇಂದಿರಾ ಗಾಂಧಿ ಪ್ರಜಾ ಪ್ರಭುತ್ವ ಪದ್ಧತಿಗೆ ಗಂಡಾಂತರಕಾರಿ ಎಂದು ತಿಳಿದೇ ಆಕೆ ಪಶ್ಚಿಮ ಬಂಗಾಲದ ಎಡರಂಗ ಸರಕಾರದ ವಿರುದ್ಧ ಒಳಸಂಚು ನಡೆಸಿದಾಗ ಅದನ್ನು ವಿರೋಧಿಸುವುದಾಗಿ ಬಿ. ಜೆ. ಪಿ. ಕೂಡ ಘೋಷಿಸಿತ್ತು.

ತನ್ನ ಸರ್ವಾಧಿಕಾರಿ ಅಧಿಕಾರ ಕಾಲ್ಕೆಳಗಿನಿಂದ ಕುಸಿಯುತ್ತಿರುವುದನ್ನು ಕಂಡು ಇಂದಿರಾಗಾಂಧಿ ಅದರ ಉಳಿಯುವಿಕೆಗಾಗಿ ಸರ್ವ ಪ್ರಯತ್ನ ನಡೆಸಿದ್ದಾರೆ. ಸಂವಿಧಾನಾತ್ಮಕ ಹಕ್ಕಿಗಾಗಿ, ಪ್ರಜಾ ಪ್ರಭುತ್ವದ ರಕ್ಷಣೆಗಾಗಿ ಎಲ್ಲರೂ ಹೋರಾಡುವುದು ಅತ್ಯಗತ್ಯ. ಪುದುಚೇರಿಯ ಘಟನೆಯಿಂದ ಎಲ್ಲರೂ ಎಚ್ಚರಗೊಳ್ಳಬೇಕಾದ್ದು ಅತ್ಯಗತ್ಯ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ಪುದುಚೇರಿಯಂಥ ಘಟನೆಗಳು ಇಂದಿರಾ ಗಾಂಧಿಯಿಂದ ನಡೆಯುತ್ತದೆ, ಅವುಗಳ ಕುರಿತು ಎಚ್ಚರಿಕೆಯಿಂದಿರಬೇಕೆಂದು ಹೇಳುತ್ತಲೇ ಬಂದಿದೆ. ಅಂಥ ಹೇಳಿಕೆಗಳಿಗೆ ಪುದುಚೇರಿ ಸಾಕ್ಷಿಯಾಗಿದೆ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ನಿಲುಮೆ ಸರಿ ಎಂದು ತೋರಿಸಿಕೊಟ್ಟಿದೆ.

ಬಿ. ಡಿ. ಕೆ. ಮತ್ತು ಸುಂದತ್ರಾ ಕಾರ್ಮಿಕರಿಂದ ಅನ್ನಸತ್ಯಾಗ್ರಹ

ಹುಬ್ಬಳ್ಳಿಯ ಹೋರಾಟನಿರತ ಬಿ. ಡಿ. ಕೆ. ಅಲಾಯ್ ಮತ್ತು ಸುಂದತ್ರಾ ಕಾರ್ಮಿಕರು ದಿನಾಂಕ 20-6-83ರಿಂದ ತಹಶೀಲದಾರ ಕಚೇರಿ ಎದುರು ಸರತಿ ಅನ್ನಸತ್ಯಾಗ್ರಹ ಪ್ರಾರಂಭಿಸಿದ್ದಾರೆ. ದಿನಾಂಕ 18-6-83ರಂದು ಸೇರಿದ್ದ ಸಿ. ಐ. ಟಿ. ಯು. ನೇತೃತ್ವದ ಜಂಟಿ ಕ್ರಿಯಾ ಸಮಿತಿಯ ಸಭೆಯಲ್ಲಿ ಈ ನಿರ್ಣಯವನ್ನು ಕೈಕೊಳ್ಳಲಾಗಿತ್ತು. ದಿನಾಂಕ 20ರಂದು ಮುಂಜಾನೆ ಎರಡೂ ಕಂಪನಿಗಳ ನೂರಾರು ಕಾರ್ಮಿಕರು ಗೋಕುಲ ಕ್ರಾಸ್‌ನಿಂದ ಲ್ಯಾಮಿಂಗ್‌ಟನ್ ರೋಡ್‌ವರೆಗೆ ಜಂಟೀ ಮೆರವಣಿಗೆ ನಡೆಸಿದರು. ಅನಂತರ ನಡೆಸಿದ ಬಹಿರಂಗ ಸಭೆಯಲ್ಲಿ ಕಾ। ಸುಧೀಂದ್ರ, ಕಾ। ವಿ. ಎಂ. ಪೂಜಾರ, ಕಾ। ಶಿರಪೂರ ಹಾಗೂ ಕಾ। ಅಬ್ದುಲ್ ಮುನಾಫ ದಾವಣಗೇರಿಯವರು ಮಾತನಾಡಿ ಸರತಿ ಅನ್ನ ಸತ್ಯಾಗ್ರಹವನ್ನು ಮಹಾನಗರದ ಸಮಸ್ತ ಕಾರ್ಮಿಕ ಜನತೆ ಮತ್ತು ಸಾರ್ವಜನಿಕರ ಬೆಂಬಲ ಪಡೆಯುವದಕ್ಕಾಗಿ ಹಾಗೂ ಸಮಸ್ಯೆಯನ್ನು ಇತ್ಯರ್ಥಗೊಳಿಸಲು ಸರಕಾರದ ಮೇಲೆ ಒತ್ತಾಯ ತರುವುದಕ್ಕಾಗಿ ಕೈಕೊಳ್ಳಲಾಗಿದೆ ಎಂದು ಹೇಳಿದರು. ಸರಕಾರ ವಿಳಂಬ ಮಾಡದೇ ಸೂಕ್ತವಾಗಿ ಮಧ್ಯ ಪ್ರವೇಶ ಮಾಡದಿದ್ದರೆ ಜಂಟೀ ಹೋರಾಟದ ಮುಂದಿನ ತೀವ್ರ ಹೆಜ್ಜೆಗಳಿಗೆ ಕಾರ್ಮಿಕರು ತಯಾರಾಗಿರಬೇಕೆಂದು ಅವರು ನುಡಿದರು. ಪ್ರತಿದಿನ ಸುಂದತ್ರಾ ಕಂಪನಿಯ 10 ಹಾಗೂ ಬಿ. ಡಿ. ಕೆ. ಫ್ಯಾಕ್ಟರಿಯ 5 ಕಾರ್ಮಿಕರು ಸರತಿ ಉಪವಾಸಕ್ಕೆ ಕುಳಿತಿದ್ದು ಅವರ ಬೆಂಬಲಾರ್ಥ ಜಂಟೀ ಕ್ರಿಯಾ ಸಮಿತಿಯ ಇತರ ಸಂಘಟನೆಗಳ ಪ್ರತಿನಿಧಿಗಳು ಧರಣಿ ಕೂಡಲು ಪ್ರಾರಂಭಿಸಿದ್ದಾರೆ. ಇಲೆಕ್ಟ್ರಿಕ್ ಕೆಲಸಗಾರರ ಸಂಘದವರು ಸುಂದತ್ರಾ ಹಾಗೂ ಬಿ. ಡಿ. ಕೆ. ಹೋರಾಟ ನಿಧಿಗಳಿಗೆ ಕ್ರಮವಾಗಿ ರೂ. 750 ಮತ್ತು ರೂ. 500 ಧನ ಸಹಾಯ ನೀಡಿದ್ದಾರೆ, ದಿನಾಂಕ 22ರಂದು ರಾಜ್ಯ ಸಿ. ಐ. ಟಿ. ಯು. ಕಾರ್ಯದರ್ಶಿ ಕಾ। ವಿ. ಜೆ. ಕೆ. ನಾಯರ್ ಅವರು ಸತ್ಯಾಗ್ರಹಿಗಳನ್ನು ಹಾಗೂ ಇತರ ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದರು.

ಬೆಂಗಳೂರು :

ರೈತ ಸಂಘದಿಂದ ಮೆರವಣಿಗೆ ಧರಣಿ ಮುಷ್ಕರ

ಕರ್ನಾಟಕ ಪ್ರಾಂತ ರೈತ ಸಂಘ ಬೆಂಗಳೂರು ಜಿಲ್ಲಾ ಘಟಕದ ಆಶ್ರಯದಲ್ಲಿ ದಿನಾಂಕ 27-6-83 ರಂದು ಜಿಲ್ಲೆಯ ವಿವಿಧ ಭಾಗಗಳಿಂದ ಬಂದಿದ್ದ ಸುಮಾರು ಸಾವಿರ ಮಂದಿ ರೈತರು ಸಿಲ್ವರ್ ಜೂಬಿಲಿ ಪಾರ್ಕ್‌ನಿಂದ ಮೆರವಣಿಗೆ ಹೊರಟು ಜಿಲ್ಲಾಧಿಕಾರಿಯವರ ಕಚೇರಿಯ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು. ಜಿಲ್ಲಾಧಿಕಾರಿಯವರ ಗೈರು ಹಾಜರಿಯಲ್ಲಿ ಕಚೇರಿಯ ಮುಖ್ಯಾಧಿಕಾರಿಯವರು ಮನವಿ ಸ್ವೀಕರಿಸಲು ಬಂದಾಗ ರೈತರು ಜಿಲ್ಲಾಧಿಕಾರಿಯವರು ಬರುವವರೆಗೆ ನಾವು ಹೋಗುವುದಿಲ್ಲವೆಂದು ತಿಳಿಸಿ ಧರಣಿಯನ್ನು ಮುಂದುವರೆಸಿದರು. ನಂತರ ಸಂಜೆ 7 ಗಂಟೆಗೆ ಜಿಲ್ಲಾಧಿಕಾರಿಯವರು ಬಂದು ಮನವಿ ಪತ್ರ ಸ್ವೀಕರಿಸಿ ಅದನ್ನು ಸರ್ಕಾರದ ಗಮನಕ್ಕೆ ತರುವುದಾಗಿ ಆಶ್ವಾಸನೆ ನೀಡಿದರು.

ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿದ ರೈತರನ್ನುದ್ದೇಶಿಸಿ ಸಿ.ಪಿ.ಐ. (ಎಂ) ಶಾಸಕರಾದ ಕಾ॥ ಎಸ್. ಸೂರ್ಯನಾರಾಯಣರಾವ್ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಕಾ॥ ಪಿ. ಜಗನ್ನಾಥ್ ಜಿಲ್ಲಾ ಕಾರ್ಯದರ್ಶಿ ಕಾ॥ ಲಕ್ಕಣ್ಣ, ಕಾ॥ ರಾಮಭದ್ರಯ್ಯ, ಕಾ॥ ಶಾಮಣ್ಣರೆಡ್ಡಿ, ಕಾ॥ ಮನೋಹರ ಅವರುಗಳು ಮಾತನಾಡಿ ರೈತರ ಬೇಡಿಕೆಗಳನ್ನು ಸರ್ಕಾರ ಬಗೆಹರಿಸದಿದ್ದಲ್ಲಿ ರೈತರು ತೀವ್ರವಾದ ಹೋರಾಟಕ್ಕೆ ಇಳಿಯಬೇಕಾಗುತ್ತದೆಂಬುದಾಗಿ ಎಚ್ಚರಿಸಿದರು.

ರೈತರ ಪ್ರಮುಖ ಬೇಡಿಕೆಗಳು

1. ಸರ್ಕಾರಿ ಬಂಜರು ಭೂಮಿಯಲ್ಲಿ ಬೇಸಾಯ ಮಾಡುತ್ತಿರುವ ಬಡ ರೈತರು, ಕೃಷಿ ಕಾರ್ಮಿಕರಿಗೆ ಹಕ್ಕು ಪತ್ರ ನೀಡಬೇಕು.

2. ರೈತರ ಸಾಲದ ಬಡ್ಡಿ ಮನ್ನಾ ಮಾಡುವುದಾಗಿ ಘೋಷಿಸಿರುವ ಅವಧಿಯನ್ನು ಮುಂದಿನ ಸುಗ್ಗಿಯವರೆಗೆ ವಿಸ್ತರಿಸಬೇಕು ಬಡ ರೈತರು ಮತ್ತು ಕೃಷಿ ಕಾರ್ಮಿಕರ ಎಲ್ಲಾ ಸಾಲವನ್ನು ಮನ್ನಾ ಮಾಡಬೇಕು.

3. ಸಹಕಾರಿ ಸಂಘಗಳು, ಬ್ಯಾಂಕುಗಳು ವಸೂಲಿ ಎಂಬ ನೆಪ ಒಡ್ಡಿ ಮರು ಸಾಲ ಕೊಡುವುದನ್ನು ನಿಲ್ಲಿಸಿದ್ದಾರೆ. ಆದ ಕಾರಣ ಈ ಕೂಡಲೇ ಸಾಲ ನೀಡುವಂತೆ ಮಾಡುವುದು.

4. ಕೃಷಿ ಕಾರ್ಮಿಕರ ಕನಿಷ್ಠ ಕೂಲಿಯನ್ನು ವಿಮರ್ಶೆ ಮಾಡಿ ಜಾರಿಗೊಳಿಸುವುದು.

5. ರಾಜ್ಯದಲ್ಲಿ ರೈತರ ಹೋರಾಟ ಕಾಲದಲ್ಲಿ ರೈತರ ಮೇಲೆ ಹೂಡಿರುವ ಎಲ್ಲಾ ಮೊಖದ್ದಮೆಗಳನ್ನು ವಾಪಸ್ಸು ತೆಗೆದುಕೊಳ್ಳುವುದು.

6. ಹೊಸಕೋಟೆ ತಾಲ್ಲೂಕಿನ ಬಿದರಹಳ್ಳಿ ಹೋಬಳಿ ಚನ್ನಸಂದ್ರಕ್ಕೆ ಸೇರಿದ ಸರ್ವೆ ನಂ. 115 ರಲ್ಲಿ ಕೃಷಿ ಕೂಲಿಕಾರರು, ಬಡರೈತರು ಅನೇಕ ವರ್ಷಗಳಿಂದ ಮನೆ ಕಟ್ಟಿಕೊಂಡು ಬೇಸಾಯ ಮಾಡುತ್ತಿದ್ದು ಅದನ್ನು ಗಿರಿರಾಜಗೌಡ ಎಂಬ ಜಮೀನ್ದಾರರು ಹಾಳುಗೆಡವಿದ್ದಾರೆ. ಅವರಿಗೆ ಈಗಾಗಲೇ 50 ಎಕರೆ ಸ್ವಂತ ಜಮೀನಿದ್ದರೂ ಸರ್ಕಾರ 16 ಎಕರೆ ಭೂಮಿ ಮಂಜೂರು ಮಾಡಿರುವುದನ್ನು ವಜಾ ಮಾಡಿ ಅಲ್ಲಿ ಬೇಸಾಯ ಮಾಡುತ್ತಿರುವ ರೈತರಿಗೆ ಆ ಜಮೀನನ್ನು ಮಂಜೂರು ಮಾಡುವುದು.

7. 55 ವರ್ಷ ವಯಸ್ಸಾದ ಬಡ ರೈತರು ಮತ್ತು ಕೃಷಿ ಕಾರ್ಮಿಕರಿಗೆ ನಿವೃತ್ತಿ ವೇತನ ನೀಡುವುದು.

8. ಕನಕಪುರ ತಾಲ್ಲೂಕಿನ ಗುಳ್ಳಹಟ್ಟಿ ಕಾವಲ್ ಗ್ರಾಮದ 200 ಕುಟುಂಬಗಳ ಭೂಮಿಯನ್ನು ಅವರ ಹೆಸರಿಗೆ ಮಂಜೂರು ಮಾಡಬೇಕು.

ಶಿಡ್ಲಘಟ್ಟ ತಾಲ್ಲೂಕ್ ಕುಡಿಯುವ ನೀರಿಗಾಗಿ ಸಿ.ಪಿ.ಐ.(ಎಂ)ನಿಂದ ಧರಣಿ ಸತ್ಯಾಗ್ರಹ

ಮಳ್ಳೂರು ಗ್ರಾಮದ ಜನತೆಗೆ ಕುಡಿಯುವ ನೀರನ್ನು ಒದಗಿಸಲು ಒತ್ತಾಯಿಸಿ ದಿ. 20-6-83 ರಂದು ಬೃಹತ್ ಮೆರವಣಿಗೆ ನಡೆಸಿ, ತಹಸೀಲ್ದಾರರಿಗೆ ಮನವಿಯನ್ನು ಸಲ್ಲಿಸಲಾಯಿತು.

ಮಳ್ಳೂರು ಗ್ರಾಮಕ್ಕೆ ಕುಡಿಯುವ ನೀರನ್ನು ಒದಗಿಸಲು ಸರಕಾರ ಒಂದು ಬೋರ್‌ವೆಲ್ಲನ್ನು ಸರಕಾರಿ ಭೂಮಿಯಲ್ಲಿ ಈಗಾಗಲೇ ತೋಡಿದ್ದು, ಟ್ಯಾಂಕ್ ಮುಖಾಂತರ ನೀರು ಒದಗಿಸಲು ತೀರ್ಮಾನಿಸಲಾಗಿದ್ದರೂ ಎಸ್. ಟಿ. ಮುನಿಸ್ವಾಮಯ್ಯ ಎಂಬ ಜಮೀನ್ದಾರ, ಸರಕಾರಿ ಜಮೀನನ್ನು ತನ್ನ ಜಮೀನೆಂದು ನಕಲಿ ಕಾಗದ ಪತ್ರಗಳನ್ನು ತೋರಿಸಿ ತಡೆಯೊಡ್ಡಿದ್ದಾನೆ. ಇದನ್ನು ಪ್ರತಿಭಟಿಸಿ, ಸಿ.ಪಿ.ಐ (ಎಂ) ಸತ್ಯಾಗ್ರಹ ನಡೆಸಿದ್ದು, ಕೂಡಲೇ ಕ್ರಮ ತೆಗೆದುಕೊಳ್ಳದೆ ಹೋದಲ್ಲಿ ಉಗ್ರ ಹೋರಾಟವನ್ನು ನಡೆಸಬೇಕಾಗುತ್ತದೆಂದು ಕೆ. ಎಂ ವೆಂಕಟೇಶ್ ತಾಲ್ಲೋಕು ಕಾರ್ಯದರ್ಶಿಯವರು ಪತ್ರಿಕಾ ಹೇಳಿಕೆಯನ್ನಿತ್ತಿದ್ದಾರೆ.

Printed & Published by P. Ramachandra Rao by him on behalf of the Communist Party of India (Marxist) Karnataka State Committee L-56 K. V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 24154 Printed at Karnataka Pressmen Associates (P) Limited, 54/1, K. R. Road, Bangalore-4 Editor: P. RAMACHANDRA RAO